# ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1985

03.09.2001ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 18ನೇ ಸಂಪುಟದ 1ನೇ ಸಂಚಿಕೆಯಲ್ಲಿ 53 ರಿಂದ 67ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ಪ್ರಕರಣಗಳ ಅನುಕ್ರಮಣಿಕೆ

### ಅಧ್ಯಾಯ – 1
### ಪ್ರಾರಂಭಿಕ

**ಪ್ರಕರಣಗಳು**

1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು

### ಅಧ್ಯಾಯ – II
### ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ

3. ಪ್ರಾಧಿಕಾರದ ರಚನೆ ಮತ್ತು ನಿಗಮನ
4. ಸದಸ್ಯ ಪದಕ್ಕೆ ಅನರ್ಹತೆ
5. ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು
6. ಸದಸ್ಯನು ಪದವನ್ನು ತೆರವು ಮಾಡುವುದು
7. ಪುನರ್‌ನೇಮಕಕ್ಕೆ ಸದಸ್ಯನ ಅರ್ಹತೆ
8. ಸಭೆಗಳು
9. ಖಾಲಿ ಸ್ಥಾನ ಮುಂತಾದವುಗಳು ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು
10. ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿ
11. ಪ್ರಾಧಿಕಾರವು ವ್ಯವಹಾರ ತತ್ವಗಳಿಗನುಸಾರ ಕಾರ್ಯನಿರ್ವಹಿಸುವುದು

### ಅಧ್ಯಾಯ – III
### ಪ್ರಾಧಿಕಾರದ ಪ್ರಕಾರ್ಯಗಳು

12. ಪ್ರಾಧಿಕಾರದ ಪ್ರಕಾರ್ಯಗಳು

### ಅಧ್ಯಾಯ – IV
### ಸ್ವತ್ತು ಮತ್ತು ಕರಾರು

13. ಕೇಂದ್ರ ಸರ್ಕಾರದ ಆಸ್ತಿಗಳು ಮತ್ತು ಹೊಣೆಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸುವುದು
14. ಪ್ರಾಧಿಕಾರಕ್ಕಾಗಿ ಭೂಮಿಯನ್ನು ಕಡ್ಡಾಯವಾಗಿ ಆರ್ಜಿಸುವುದು
15. ಪ್ರಾಧಿಕಾರವು ಕರಾರುಗಳನ್ನು ಮಾಡಿಕೊಳ್ಳುವುದು
16. ಪ್ರಾಧಿಕಾರದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವ ವಿಧಾನ

### ಅಧ್ಯಾಯ – V
### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

17. ಫೀಜು, ಬಾಡಿಗೆ, ಮುಂತಾದವುಗಳನ್ನು ವಿಧಿಸುವುದಕ್ಕೆ ಪ್ರಾಧಿಕಾರದ ಅಧಿಕಾರ
18. ಕೇಂದ್ರ ಸರ್ಕಾರದಿಂದ ಪ್ರಾಧಿಕಾರಕ್ಕೆ ಹೆಚ್ಚಿನ ಬಂಡವಾಳ ಮತ್ತು ಅನುದಾನ
19. ಪ್ರಾಧಿಕಾರದ ನಿಧಿ
20. ಹೆಚ್ಚುವರಿ ನಿಧಿಗಳ ಹಂಚಿಕೆ
21. ಚಟುವಟಿಕೆಗಳ ಕಾರ್ಯಕ್ರಮ ಮತ್ತು ಆರ್ಥಿಕ ಅಂದಾಜುಗಳನ್ನು ಸಲ್ಲಿಸುವುದು
22. ನಿಧಿಗಳ ಹೂಡಿಕೆ
23. ಪ್ರಾಧಿಕಾರವು ಸಾಲ ತೆಗೆದುಕೊಳ್ಳುವ ಅಧಿಕಾರಗಳು
24. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

## ಅಧ್ಯಾಯ – VI
### ಸಂಕೀರ್ಣ

25. ವಾರ್ಷಿಕ ವರದಿಯನ್ನು ಸಲ್ಲಿಸುವುದು
26. ಪ್ರತ್ಯಾಯೋಜನೆ
27. ಪ್ರಾಧಿಕಾರದ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣನ
28. ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು
29. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
30. ಕಳೆದುಹೋದ ಸ್ವತ್ತಿನ ಅಭಿರಕ್ಷೆ ಮತ್ತು ವಿಲೆ
31. ಆದಾಯ ತೆರಿಗೆಗೆ ಸಂಬಂಧಿಸಿದ ಉಪಬಂಧಗಳು
32. ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರದ ಅಧಿಕಾರ
33. ನಿರ್ದೇಶನಗಳನ್ನು ನೀಡಲು ಅಧಿಕಾರ
34. ಯಾವುದೇ ಏರೋಡ್ರೊಮ್‌ನ ವ್ಯವಸ್ಥಾಪನೆಯನ್ನು ಪ್ರಾಧಿಕಾರದಿಂದ ತಾತ್ಕಾಲಿಕವಾಗಿ ತಪ್ಪಿಸಲು ಕೇಂದ್ರ ಸರ್ಕಾರದ ಅಧಿಕಾರ
35. ಪ್ರಾಧಿಕಾರವನ್ನು ಅಧಿಕ್ರಮಿಸಲು ಕೇಂದ್ರ ಸರ್ಕಾರದ ಅಧಿಕಾರ
36. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ
37. ನಿಯಮ ರಚನಾಧಿಕಾರ
38. ವಿನಿಯಮ ರಚನಾಧಿಕಾರ
39. ವಿನಿಯಮಗಳಿಗೆ ಸಂಬಂಧಪಟ್ಟ ಪೂರಕ ಉಪಬಂಧಗಳು
40. ಸಂಸತ್ತಿನ ಮುಂದೆ ನಿಯಮಗಳು ಮತ್ತು ವಿನಿಯಮಗಳನ್ನು ಮಂಡಿಸುವುದು
41. ತೊಂದರೆಗಳ ನಿವಾರಣೆಗೆ ಅಧಿಕಾರ
42. 1934ರ 22ನೇ ಅಧಿನಿಯಮದ ತಿದ್ದುಪಡಿ

# ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1985

## (1985ರ ಅಧಿನಿಯಮ ಸಂಖ್ಯೆ 64)

[7ನೇ ಡಿಸೆಂಬರ್, 1985]

ದೇಶೀಯ ವಿಮಾನ ಸಾರಿಗೆ ಸೇವೆಗಳನ್ನು ನಡೆಸುವ ಅಥವಾ ನಡೆಸಲು ಉದ್ದೇಶಿಸುವಂತಹ ವಿಮಾನ ನಿಲ್ದಾಣಗಳ ಮತ್ತು ಸಿವಿಲ್ ಎನ್‌ಕ್ಲೇವ್‌ಗಳ ಮತ್ತು ಎಲ್ಲಾ ಸಂಪರ್ಕ ಕೇಂದ್ರಗಳ ವ್ಯವಸ್ಥಾಪನೆಗಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತಾರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I
## ಪ್ರಾರಂಭಿಕ

**1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1985 ಎಂದು ಕರಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದ್ದು.

(3) ಇದು,–

(ಎ) ಎಲ್ಲಾ ವಿಮಾನ ನಿಲ್ದಾಣಗಳಿಗೆ, ಎಂದರೆ,–

(i) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1971 ಅನ್ವಯಿಸುವ ವಿಮಾನ ನಿಲ್ದಾಣಗಳಿಗೆ; ಮತ್ತು

(ii) ಒಕ್ಕೂಟದ ಯಾವುದೇ ಸಶಸ್ತ್ರ ಬಲಕ್ಕೆ ಸೇರಿದ ಅಥವಾ ಅದರ ನಿಯಂತ್ರಣಕ್ಕೆ ಒಳಪಟ್ಟ ವಿಮಾನ ನಿಲ್ದಾಣ ಮತ್ತು ವಿಮಾನ ಕ್ಷೇತ್ರಗಳನ್ನು ಹೊರತುಪಡಿಸಿ

– ಎಲ್ಲ ದೇಶೀಯ ವಿಮಾನ ಸಾರಿಗೆ ಸೇವೆಗಳನ್ನು ನಡೆಸಲಾಗುವ ಅಥವಾ ನಡೆಸಲು ಉದ್ದೇಶಿಸಿರುವಂತಹ ಎಲ್ಲಾ ಏರೋಡ್ರೊಮ್‌ಗಳಿಗೆ;

(ಬಿ) ಎಲ್ಲಾ ಸಿವಿಲ್ ಎನ್‌ಕ್ಲೇವ್‌ಗಳಿಗೆ; ಮತ್ತು

(ಸಿ) ಎಲ್ಲಾ ವೈಮಾನಿಕ ಸಂಪರ್ಕ ಕೇಂದ್ರಗಳಿಗೆ
– ಅನ್ವಯಿಸುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂಧರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ವಿಮಾನ ಸಂಚಾರ ಸೇವೆ" ಎಂಬುದರಲ್ಲಿ ವಿಮಾನ ಉಡ್ಡಾಣ ಮಾಹಿತಿ ಸೇವೆ, ಮುನ್ನೆಚ್ಚರಿಕೆ ಸೇವೆ, ವಿಮಾನ ಸಂಚಾರ ಸಲಹಾ ಸೇವೆ, ವಿಮಾನ ಸಂಚಾರ ನಿಯಂತ್ರಣ ಸೇವೆ, ಪ್ರದೇಶ ನಿಯಂತ್ರಣ ಸೇವೆ, ಆಗಮನ ನಿಯಂತ್ರಣ ಸೇವೆ ಮತ್ತು ವಿಮಾನ ನಿಲ್ದಾಣ ಸೇವೆ ಇವು ಒಳಗೊಂಡಿರುತ್ತವೆ;

(ಬಿ) "ವಿಮಾನ ಸಾರಿಗೆ ಸೇವೆ" ಎಂದರೆ ವ್ಯಕ್ತಿಗಳನ್ನು, ಅಂಚೆ ಅಥವಾ ಯಾವುದೇ ಇತರ ಸಜೀವ ಅಥವಾ ನಿರ್ಜೀವ ವಸ್ತುಗಳನ್ನು ಯಾವುದೇ ಬಗೆಯ ಪರಿಶ್ರಮ ಧನಕ್ಕಾಗಿ ವಿಮಾನದ ಮೂಲಕ ಸಾಗಿಸುವ ಯಾವುದೇ ಸೇವೆ, ಅಂತಹ ಸೇವೆಯು ಒಂದು ಉಡ್ಡಾಣಕ್ಕೆ ಅಥವಾ ಉಡ್ಡಾಣಗಳ ಸರಣಿಗೆ ಸಂಬಂಧಪಟ್ಟಿರಬಹುದು;

(ಸಿ) "ಪ್ರಾಧಿಕಾರ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ;

(ಡಿ) "ಸಿವಿಲ್ ಎನ್‌ಕ್ಲೇವ್" ಎಂದರೆ ಒಕ್ಕೂಟದ ಯಾವುದೇ ಸಶಸ್ತ್ರ ಬಲಕ್ಕೆ ಸೇರಿದ ವಿಮಾನ ನಿಲ್ದಾಣದಲ್ಲಿ, ಅಂತಹ ವಿಮಾನ ನಿಲ್ದಾಣದಿಂದ ಯಾವುದೇ ವಿಮಾನ ಸಾರಿಗೆ ಸೇವೆಯನ್ನು ಬಳಸಿಕೊಳ್ಳುವ ವ್ಯಕ್ತಿಗಳ ಉಪಯೋಗಕ್ಕಾಗಿ ಅಥವಾ ಅಂಥ ಸೇವೆಯಿಂದ ಸಾಮಾನು ಸರಂಜಾಮು ಅಥವಾ ರವಾನೆ ಸರಕುಗಳ ನಿರ್ವಹಣೆಗಾಗಿ ಹಂಚಿಕೆ ಮಾಡಿದ ಯಾವುದೇ ಪ್ರದೇಶವಿದ್ದರೆ, ಆ ಪ್ರದೇಶ ಮತ್ತು ಅದು ಅಂತಹ ಪ್ರದೇಶದಲ್ಲಿನ ಯಾವುದೇ ಕಟ್ಟಡ ಮತ್ತು ನಿರ್ಮಿತಿ ಇರುವ ಜಮೀನನ್ನು ಒಳಗೊಂಡಿರುತ್ತದೆ;

(ಇ) "ಹೆಲಿಕಾಪ್ಟರ್ ನಿಲ್ದಾಣ" ಎಂದರೆ ಹೆಲಿಕಾಪ್ಟರುಗಳನ್ನು ಇಳಿಸಲು ಮತ್ತು ಏರಿಸಲು ಉಪಯೋಗಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಲಾದ ಭೂಮಟ್ಟದ ಅಥವಾ ನಿರ್ಮಿತಿಯ ಮೇಲಿನ ಎತ್ತರದ ಪ್ರದೇಶ ಮತ್ತು ಇದು ಹೆಲಿಕಾಪ್ಟರುಗಳನ್ನು ನಿಲ್ಲಿಸುವ ಯಾವುದೇ ಪ್ರದೇಶ ಮತ್ತು ಅಂಥ ಪ್ರದೇಶದ ಮೇಲಿನ ಅಥವಾ ಅದಕ್ಕೆ ಸಂಬಂಧಿಸಿದ ಎಲ್ಲಾ ಕಟ್ಟಡಗಳು ಮತ್ತು ನಿರ್ಮಿತಿಗಳನ್ನು ಒಳಗೊಂಡಿರುತ್ತದೆ.

(ಎಫ್) "ಸದಸ್ಯ" ಎಂದರೆ ಪ್ರಾಧಿಕಾರದ ಸದಸ್ಯ ಮತ್ತು ಇದು ಸಭಾಧ್ಯಕ್ಷರನ್ನು ಒಳಗೊಂಡಿರುತ್ತದೆ, ಆದರೆ, 3ನೇ ಪ್ರಕರಣದ (3) ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಪದನಿಮಿತ್ತ ಸದಸ್ಯನನ್ನು, 4, 5, 6 ಮತ್ತು 7ನೇ ಪ್ರಕರಣಗಳ ಉದ್ದೇಶಗಳಿಗಾಗಿ ಒಳಗೊಂಡಿರುವುದಿಲ್ಲ;

(ಜಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳು; ಮತ್ತು

(ಐ) ಇದರಲ್ಲಿ ಉಪಯೋಗಿಸಲಾದ ಮತ್ತು ಪರಿಭಾಷಿಸದೇ ಇರುವ, ಆದರೆ, ವಿಮಾನ ಅಧಿನಿಯಮ, 1934ರಲ್ಲಿ ಪರಿಭಾಷಿಸಲಾದ ಪದಗಳು ಮತ್ತು ಪದಾವಳಿಗಳು, ಅನುಕ್ರಮವಾಗಿ ಆ ಅಧಿನಿಯಮದಲ್ಲಿ ಅವುಗಳಿಗೆ ಕೊಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II
## ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ

**3. ಪ್ರಾಧಿಕಾರದ ರಚನೆ ಮತ್ತು ನಿಗಮನ.–** (1) ಈ ಅಧಿನಿಯಮದ ಪ್ರಾರಂಭದಂದಿನಿಂದ ಪರಿಣಾಮಕಾರಿಯಾಗುವಂತೆ, ಕೇಂದ್ರ ಸರ್ಕಾರವು ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರವೆಂದು ಕರೆಯಲಾಗುವ ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ಈ ಹಿಂದೆ ಹೇಳಿದ ಹೆಸರಿನಲ್ಲಿ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರು ಇರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ಆ ಹೆಸರಿನಲ್ಲಿ ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು,–

(ಎ) ಕೇಂದ್ರ ಸರ್ಕಾರವು ನೇಮಕ ಮಾಡುವ ಒಬ್ಬ ಅಧ್ಯಕ್ಷನನ್ನು;

(ಬಿ) ಪದನಿಮಿತ್ತ ಸಿವಿಲ್ ವಿಮಾನಯಾನ ಮಹಾ ನಿರ್ದೇಶಕನನ್ನು; ಮತ್ತು

(ಸಿ) ಕೇಂದ್ರ ಸರ್ಕಾರವು ನೇಮಕ ಮಾಡುವ ಎಂಟು ಜನರಿಗಿಂತ ಕಡಿಮೆಯಿಲ್ಲದ ಮತ್ತು ಹದಿನಾಲ್ಕು ಜನರಿಗಿಂತ ಹೆಚ್ಚಿಲ್ಲದಷ್ಟು ಸದಸ್ಯರನ್ನು

– ಒಳಗೊಂಡಿರತಕ್ಕದ್ದು.

(4) ಅಧ್ಯಕ್ಷನು ಪೂರ್ಣಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು (3)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಇತರೆ ಸದಸ್ಯರುಗಳನ್ನು ಕೇಂದ್ರ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂತೆ ಪೂರ್ಣಕಾಲಿಕ ಅಥವಾ ಅಂಶಕಾಲಿಕ ಸದಸ್ಯರನ್ನಾಗಿ ನೇಮಕ ಮಾಡಬಹುದು.

(5) 3ನೇ ಉಪಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಅಧ್ಯಕ್ಷ ಮತ್ತು ಸದಸ್ಯರನ್ನು, ವಿಮಾನ ಸಾರಿಗೆ ಅಥವಾ ಇತರ ಸಾರಿಗೆ ಸೇವೆಗಳು, ಕೈಗಾರಿಕೆ, ವಾಣಿಜ್ಯ ಅಥವಾ ಹಣಕಾಸಿನ ವಿಷಯಗಳು ಅಥವಾ ಆಡಳಿತ – ಇವುಗಳಲ್ಲಿ ವಿಶೇಷ ಜ್ಞಾನ ಮತ್ತು ಅನುಭವ ಹೊಂದಿರುವ ವ್ಯಕ್ತಿಗಳಿಂದ ಮತ್ತು ಕೆಲಸಗಾರರ ಮತ್ತು ಬಳಕೆದಾರರ ಸಂಸ್ಥೆಗಳನ್ನು ಪ್ರತಿನಿಧಿಸಲು ಸಮರ್ಥರಾದಂತಹ ವ್ಯಕ್ತಿಗಳಿಂದ ಆಯ್ಕೆ ಮಾಡತಕ್ಕದ್ದು.

4. **ಸದಸ್ಯ ಪದಕ್ಕೆ ಅನರ್ಹತೆ.–** ಒಬ್ಬ ವ್ಯಕ್ತಿಯು,–

(ಎ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನೊಳಗೊಳ್ಳುವಂತಹ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥ ಚಿತ್ತದವನಾಗಿದ್ದು, ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದರೆ; ಅಥವಾ

(ಡಿ) ಸರ್ಕಾರದ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮಿತ ನಿಕಾಯದ ಸೇವೆಯಿಂದ ಅವನನ್ನು ತೆಗೆದುಹಾಕಿದ್ದರೆ ಅಥವಾ ವಜಾಮಾಡಿದ್ದರೆ; ಅಥವಾ

(ಇ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಸದಸ್ಯನಾಗಿ ತನ್ನ ಪ್ರಕಾರ್ಯಗಳ ನಿರ್ವಹಣೆಗೆ ಪ್ರತಿಕೂಲ ಪರಿಣಾಮವನ್ನುಂಟುಮಾಡಬಹುದಾದಂಥ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಆ ಪ್ರಾಧಿಕಾರದಲ್ಲಿ ಹೊಂದಿದ್ದರೆ

– ಸದಸ್ಯನಾಗಿ ನೇಮಕಹೊಂದಲು ಅನರ್ಹನಾಗಿರತಕ್ಕದ್ದು.

5. **ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.–** (1) 6ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, (ಪದನಿಮಿತ್ತ ಸದಸ್ಯನಲ್ಲದ) ಪ್ರತಿಯೊಬ್ಬ ಸದಸ್ಯನು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು,–

(ಎ) ಸರ್ಕಾರದ ನೌಕರನಲ್ಲದ ಯಾವನೇ ಒಬ್ಬ ಪೂರ್ಣಕಾಲಿಕ ಸದಸ್ಯನಿಗೆ ಮೂರು ತಿಂಗಳ ಅವಧಿಗೆ ಕಡಿಮೆ ಇಲ್ಲದ ನೋಟೀಸನ್ನು ಕೊಟ್ಟ ತರುವಾಯ ಅಥವಾ ಅದರ ಬದಲಾಗಿ ಅವನ ಸಂಬಳ ಮತ್ತು ಭತ್ಯೆಗಳೇನಾದರೂ ಇದ್ದರೆ ಮೂರು ತಿಂಗಳ ಅವಧಿಯ ಸಂಬಳ ಮತ್ತು ಭತ್ಯೆಗಳಿಗೆ ಸಮನಾಗುವ ಮೊತ್ತವನ್ನು ಅವನಿಗೆ ಸಂದಾಯ ಮಾಡಿದ ತರುವಾಯ ಅವನ ನೇಮಕಾತಿಯನ್ನು ಕೊನೆಗೊಳಿಸಬಹುದು;

(ಬಿ) ಸರ್ಕಾರದ ನೌಕರನಲ್ಲದ ಯಾವನೇ ಅಂಶಕಾಲಿಕ ಸದಸ್ಯನನ್ನು, ನಿಯಮಿಸಬಹುದಾದಂತಹ ಅವಧಿಯ ನೋಟೀಸನ್ನು ಅವನಿಗೆ ಕೊಟ್ಟ ತರುವಾಯ ಅವನ ನೇಮಕಾತಿಯನ್ನು ಕೊನೆಗೊಳಿಸಬಹುದು; ಮತ್ತು

(ಸಿ) ಸರ್ಕಾರದ ನೌಕರನಾಗಿರುವ ಯಾವನೇ ಸದಸ್ಯನ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕೊನೆಗೊಳಿಸಬಹುದು.

(2) ಸದಸ್ಯರ ಸೇವೆಯ ಇತರ ಷರತ್ತುಗಳು ನಿಯಮಿಸಬಹುದಾದಂತಿರತಕ್ಕದ್ದು.

(3) ಯಾವನೇ ಸದಸ್ಯನು, ನಿಯಮಿಸಬಹುದಾದಂತಹ ಅವಧಿಯ ಲಿಖಿತ ನೋಟೀಸನ್ನು ಕೇಂದ್ರ ಸರ್ಕಾರಕ್ಕೆ ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂತಹ ರಾಜೀನಾಮೆಯನ್ನು ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ತರುವಾಯ ಅಂತಹ ಸದಸ್ಯನು ತನ್ನ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಅಥವಾ ಇತರ ರೀತಿಯಲ್ಲಿ ಸದಸ್ಯನ ರಾಜೀನಾಮೆ ಯಿಂದುಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ಹೊಸ ನೇಮಕಾತಿಯ ಮೂಲಕ ಭರ್ತಿಮಾಡಬಹುದು ಮತ್ತು ಆ ರೀತಿ ನೇಮಕ ಹೊಂದಿದ ವ್ಯಕ್ತಿಯು ಯಾವ ಸದಸ್ಯನ ಸ್ಥಾನದಲ್ಲಿ ಅವನನ್ನು ನೇಮಕ ಮಾಡಲಾಗಿದೆಯೋ, ಅವನು ಪದಧಾರಣ ಮಾಡಬಹುದಾಗಿದ್ದ ಉಳಿದ ಅವಧಿಯವರಗೆ ಪದಧಾರಣ ಮಾಡತಕ್ಕದ್ದು.

**6. ಸದಸ್ಯನು ಪದವನ್ನು ತೆರವು ಮಾಡುವುದು.–** ಕೇಂದ್ರ ಸರ್ಕಾರವು,–

(ಎ) ಯಾವನೇ ಸದಸ್ಯನು 4ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಅನರ್ಹತೆ ಗಳಿಗೊಳಪಟ್ಟರೆ ಅವನನ್ನು ತೆಗೆದುಹಾಕತಕ್ಕದು:

ಪರಂತು, ಯಾವನೇ ಸದಸ್ಯನಿಗೆ, ಈ ವಿಷಯದಲ್ಲಿ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ಕೊಟ್ಟ ಹೊರತು, ಅವನು ಆ ಪ್ರಕರಣದ (ಇ) ಖಂಡದಲ್ಲಿ ನಮೂದಿಸಿದ ಅನರ್ಹತೆಗೆ ಒಳಪಟ್ಟಿದ್ದಾನೆ ಎಂಬ ಆಧಾರದ ಮೇಲೆ ಅವನನ್ನು ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಯಾವನೇ ಸದಸ್ಯನು ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯ ನಡೆಸಲು ಅಸಮರ್ಥನಾದರೆ; ಅಥವಾ

(ಸಿ) ಗೈರು ಹಾಜರಿಯ ಬಗ್ಗೆ ಪ್ರಾಧಿಕಾರದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ಅಧಿಕಾರದಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಂತೆ ಅವನು ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆ ಎಂಬುದಾಗಿ ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಅವನನ್ನು ತೆಗೆದುಹಾಕತಕ್ಕದ್ದು:

ಪರಂತು, ಯಾವನೇ ಸದಸ್ಯನಿಗೆ, ಈ ವಿಷಯದಲ್ಲಿ ಅಹವಾಲು ಹೇಳುವುದಕ್ಕೆ ಸೂಕ್ತ ಅವಕಾಶವೊಂದನ್ನು ಕೊಟ್ಟ ಹೊರತು, ಅವನನ್ನು ಈ ಖಂಡದ ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

**7. ಪುನರ್‌ನೇಮಕಕ್ಕೆ ಸದಸ್ಯನ ಅರ್ಹತೆ.–** ಯಾವನೇ ವ್ಯಕ್ತಿಯು ಸದಸ್ಯನಾಗಿರುವುದು ನಿಂತುಹೋದಾಗ, 4ನೇ ಪ್ರಕರಣದ ಮೇರೆಗೆ ಅವನನ್ನು ಅನರ್ಹನೆಂದು ಪರಿಗಣಿಸಿದ ಹೊರತು, ಅಂತಹ ವ್ಯಕ್ತಿಯು ಹಾಗೆ ಪುನರ್ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

**8. ಸಭೆಗಳು.–** (1) ಪ್ರಾಧಿಕಾರವು, ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ವೇಳೆ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂಥ ಸಭೆಗಳ ಗಣಪೂರ್ತಿಯೂ ಸೇರಿದಂತೆ) ಕಾರ್ಯಕಲಾಪ ನಡೆಸುವ ಸಂಬಂಧದಲ್ಲಿ ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು, ಅಥವಾ ಯಾವುದೇ ಕಾರಣಕ್ಕಾಗಿ ಅವನು ಪ್ರಾಧಿಕಾರದ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಆ ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡುವ ಯಾವನೇ ಇತರ ಸದಸ್ಯನು ಆ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು, ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದಿಂದ ತೀರ್ಮಾನಿಸತಕ್ಕದ್ದು, ಮತ್ತು ಮತಗಳು ಸಮವಾಗಿರುವಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿದ್ದು, ಅದನ್ನು ಚಲಾಯಿಸತಕ್ಕದ್ದು.

**9. ಖಾಲಿ ಸ್ಥಾನ, ಮುಂತಾದವುಗಳು ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು,–

(ಎ) ಪ್ರಾಧಿಕಾರದಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತಿರುವ ಒಬ್ಬ ವ್ಯಕ್ತಿಯ ನೇಮಕಾತಿಯಲ್ಲಿನ ಯಾವುದೇ ನ್ಯೂನತೆ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂತೆ ಪ್ರಾಧಿಕಾರದ ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮದೋಷ

– ಈ ಕಾರಣ ಮಾತ್ರದಿಂದಲೇ ಅಸಿಂಧುಗೊಳ್ಳತಕ್ಕದ್ದಲ್ಲ.

**10. ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕಾತಿ.–** (1) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಅದನ್ನು ಸಮರ್ಥಗೊಳಿಸುವ ಉದ್ದೇಶಕ್ಕಾಗಿ, ಅದು 13ನೇ ಪ್ರಕರಣದ ಉಪಬಂಧಗಳಿಗೆ ಮತ್ತು ಈ ಸಂಬಂಧದಲ್ಲಿ ರಚಿಸಬಹುದಾಂತಹ ನಿಯಮಗಳಿಗೊಳಪಟ್ಟು, ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳು ಮತ್ತು ಇತರ ನೌಕರರನ್ನು (ಪ್ರತಿನಿಯೋಜನೆ ಮೇಲೆ ಅಥವಾ ಇತರ ರೀತಿಯಲ್ಲಿ) ನೇಮಕ ಮಾಡಿಕೊಳ್ಳತಕ್ಕದ್ದು:

ಪರಂತು, ಅಂತಹ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಅಧ್ಯಕ್ಷರೊಂದಿಗೆ ಸಮಾಲೋಚಿಸಿದ ತರುವಾಯ ಮಾಡಲಾಗುವಂಥ ಪ್ರವರ್ಗದ ಅಧಿಕಾರಿಗಳ ನೇಮಕಾತಿಯು ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟಿರತಕ್ಕದ್ದು.

(2) 13ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರವು ನೇಮಕಮಾಡಿದ ಪ್ರತಿಯೊಬ್ಬ ಅಧಿಕಾರಿ ಅಥವಾ ಇತರ ನೌಕರನು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತಹ ಸೇವಾ ಷರತ್ತುಗಳಿಗೊಳಪಡತಕ್ಕದ್ದು ಮತ್ತು ಅಂಥ ಪರಿಶ್ರಮಧನಕ್ಕೆ ಅರ್ಹರಾಗತಕ್ಕದ್ದು.

**11. ಪ್ರಾಧಿಕಾರವು ವ್ಯವಹಾರ ತತ್ವಗಳಿಗನುಸಾರ ಕಾರ್ಯನಿರ್ವಹಿಸುವುದು.–** ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ವ್ಯವಹಾರ ತತ್ವಗಳಿಗನುಸಾರ ಕಾರ್ಯ ನಿರ್ವಹಿಸತಕ್ಕದ್ದು.

## ಅಧ್ಯಾಯ – III
## ಪ್ರಾಧಿಕಾರದ ಪ್ರಕಾರ್ಯಗಳು

**12. ಪ್ರಾಧಿಕಾರದ ಪ್ರಕಾರ್ಯಗಳು.–** (1) ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳೇನಾದರೂ ಇದ್ದರೆ ಅವುಗಳಿಗೊಳಪಟ್ಟು, ಪ್ರಾಧಿಕಾರವು ಏರೋಡ್ರೊಮ್‌ಗಳ, ಸಿವಿಲ್ ಎನ್‌ಕ್ಲೇವ್‌ಗಳ ಮತ್ತು ವೈಮಾನಿಕ ಸಂಪರ್ಕ ಕೇಂದ್ರಗಳ ವ್ಯವಸ್ಥೆಯನ್ನು ದಕ್ಷತೆಯಿಂದ ನಿರ್ವಹಿಸುವುದು ಅದರ ಪ್ರಕಾರ್ಯವಾಗಿರತಕ್ಕದ್ದು.

(2) ಯಾವುದೇ ಏರೋಡ್ರೊಮ್‌ನಲ್ಲಿ ಮತ್ತು ಯಾವುದೇ ಸಿವಿಲ್ ಎನ್‌ಕ್ಲೇವ್‌ನಲ್ಲಿ ವಿಮಾನ ಸಂಚಾರ ಸೇವೆ ಮತ್ತು ವಿಮಾನ ಸಾರಿಗೆ ಸೇವೆಯನ್ನು ಒದಗಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣಗಳಲ್ಲಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಪ್ರಾಧಿಕಾರವು,–

(ಎ) ಏರೋಡ್ರೊಮ್‌ಗಳಲ್ಲಿ ಮತ್ತು ಸಿವಿಲ್ ಎನ್‌ಕ್ಲೇವ್‌ಗಳಲ್ಲಿ ರನ್‌ವೇಗಳು, ಟ್ಯಾಕ್ಸಿವೇಗಳು, ವಿಮಾನ ಖಾನೆಗಳು ಮತ್ತು ಟರ್ಮಿನಲ್‌ಗಳು ಮತ್ತು ಅನುಗತ ಕಟ್ಟಡಗಳನ್ನು ಯೋಜಿಸಬಹುದು, ಅಭಿವೃದ್ಧಿಪಡಿಸಬಹುದು, ರಚಿಸಬಹುದು ಮತ್ತು ನಿರ್ವಹಿಸಬಹುದು.

(ಬಿ) ಏರೋಡ್ರೋಮ್‌ಗಳಲ್ಲಿ ಮತ್ತು ಸುರಕ್ಷಿತ ವಿಮಾನಯಾನ ಮತ್ತು ವಿಮಾನ ಸಂಚಾರಕ್ಕೆ ಅವಶ್ಯವೆಂದು ಪರ್ಯಾಲೋಚಿಸಬಹುದಾದಂತಹ ಸ್ಥಳಗಳಲ್ಲಿ ವಿಮಾನಯಾನ ಸಾಧನಗಳು, ಸಂಪರ್ಕ ಸಾಧನಗಳು, ಗುರುತು ದೀಪಗಳು ಮತ್ತು ಭೂ ಸಹಾಯ ಸಾಧನಗಳನ್ನು ನೆಡಬಹುದು, ದೊರಕಿಸಬಹುದು, ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(ಸಿ) ಇತರ ಏಜೆನ್ಸಿಗಳ ಸಹಯೋಗದೊಂದಿಗೆ ಸುರಕ್ಷಾ ವಿಮಾನ ಸೇವೆಯನ್ನು ಮತ್ತು ಶೋಧನಾ ಮತ್ತು ರಕ್ಷಣಾ ಸೌಕರ್ಯಗಳನ್ನು ಒದಗಿಸಬಹುದು;

(ಡಿ) ಈ ಅಧಿನಿಯಮದ ಉದ್ದೇಶಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ತನ್ನ ಅಧಿಕಾರಿಗಳ ಮತ್ತು ನೌಕರರ ತರಬೇತಿಗಾಗಿ ಶಾಲೆಗಳನ್ನು ಅಥವಾ ಸಂಸ್ಥೆಗಳನ್ನು ಅಥವಾ ಕೇಂದ್ರಗಳನ್ನು ಸ್ಥಾಪಿಸಬಹುದು;

(ಇ) ತನ್ನ ನೌಕರರಿಗಾಗಿ ವಸತಿ ಕಟ್ಟಡವನ್ನು ನಿರ್ಮಿಸಬಹುದು;

(ಎಫ್) ಏರೋಡ್ರೋಮ್‌ಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಹೋಟೆಲ್‌ಗಳು, ಉಪಾಹಾರ ಗೃಹಗಳು ಮತ್ತು ವಿಶ್ರಾಂತಿ ಕೋಣೆಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು;

(ಜಿ) ಸರಕುಗಳ ಸಂಗ್ರಹಣೆಗಾಗಿ ಅಥವಾ ಸಂಸ್ಕರಣಕ್ಕಾಗಿ ಏರೋಡ್ರೋಮ್‌ಗಳಲ್ಲಿ ಉಗ್ರಾಣಗಳು ಮತ್ತು ರವಾನೆ ಸರಕು ಸಂಕೀರ್ಣಗಳನ್ನು ಸ್ಥಾಪಿಸಬಹುದು;

(ಹೆಚ್) ಏರೋಡ್ರೋಮ್‌ಗಳಲ್ಲಿ ಅಥವಾ ಸಿವಿಲ್ ಎನ್‌ಕ್ಲೇವ್‌ಗಳಲ್ಲಿ ಪ್ರಯಾಣಿಕರ ಮತ್ತು ಇತರ ವ್ಯಕ್ತಿಗಳ ಉಪಯೋಗಕ್ಕಾಗಿ ಅಂಚೆ, ಹಣ ವಿನಿಮಯ, ವಿಮೆ ಮತ್ತು ದೂರವಾಣಿ ಸಂಪರ್ಕಗಳ ಸೌಲಭ್ಯಗಳನ್ನು ವ್ಯವಸ್ಥೆಗೊಳಿಸಬಹುದು;

(ಐ) ಏರೋಡ್ರೋಮ್‌ಗಳಲ್ಲಿ ಮತ್ತು ಸಿವಿಲ್ ಎನ್‌ಕ್ಲೇವ್‌ಗಳಲ್ಲಿ ಪಹರೆ ಮತ್ತು ರಕ್ಷಣೆಗಾಗಿ ಸೂಕ್ತ ಏರ್ಪಾಟುಗಳನ್ನು ಮಾಡಬಹುದು;

(ಜೆ) ಭಾರತ ಸರ್ಕಾರದ ಭದ್ರತೆ ಮತ್ತು ಶಿಷ್ಟಾಚಾರ ಪ್ರಕಾರ್ಯಗಳಿಗೆ ಯುಕ್ತ ಗಮನಕೊಟ್ಟು ಏರೋಡ್ರೋಮ್‌ಗಳು ಮತ್ತು ಸಿವಿಲ್ ಎನ್‌ಕ್ಲೇವ್‌ಗಳಲ್ಲಿ ವಾಹನಗಳನ್ನು ನಡೆಸುವುದನ್ನು ಮತ್ತು ಪ್ರಯಾಣಿಕರ ಮತ್ತು ಸಂದರ್ಶಕರ ಪ್ರವೇಶ ಮತ್ತು ನಿರ್ಗಮನವನ್ನು ವಿನಿಯಮಿಸಬಹುದು ಮತ್ತು ನಿಯಂತ್ರಿಸಬಹುದು;

(ಕೆ) ವಿಮಾನ ನಿಲ್ದಾಣಗಳ ವಿಮಾನಯಾನ ಸೇವೆ, ಭೂ ಸಹಾಯ ಸಾಧನ ಮತ್ತು ಸುರಕ್ಷಾ ಸೇವೆಗಳು ಅಥವಾ ಅಲ್ಲಿನ ಯಾವುದೇ ಸೌಲಭ್ಯಗಳ ಯೋಜನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಭಾರತ ಮತ್ತು ಹೊರದೇಶಗಳಲ್ಲಿ ಸಮಾಲೋಚನಾ ಸೇವೆಗಳನ್ನು ಅಭಿವೃದ್ಧಿಗೊಳಿಸಬಹುದು ಮತ್ತು ಒದಗಿಸಬಹುದು;

(ಎಲ್) ಹೆಲಿಕಾಪ್ಟರು ನಿಲ್ದಾಣಗಳನ್ನು ಸ್ಥಾಪಿಸಬಹುದು ಮತ್ತು ವ್ಯವಸ್ಥೆಗೊಳಿಸಬಹುದು;

(ಎಂ) ವಿಮಾನದ ಮೂಲಕ ಪ್ರಯಾಣ ಮಾಡುವ ಪ್ರಯಾಣಿಕರಿಗೆ ಪ್ರಾಧಿಕಾರದ ಅಭಿಪ್ರಾಯದಲ್ಲಿ ಅವಶ್ಯವಿರುವಂಥ ಸಾರಿಗೆ ಸೇವೆಗಳನ್ನು ಒದಗಿಸಬಹುದು.

(ಎನ್) ಈ ಅಧಿನಿಯಮದ ಮೂಲಕ ಅದಕ್ಕೆ ವಿಧಿಸಲಾದ ಪ್ರಕಾರ್ಯಗಳನ್ನು ಇನ್ನಷ್ಟು ದಕ್ಷತೆಯಿಂದ ನಿರ್ವಹಿಸಲು ಕಂಪನಿಗಳ ಅಧಿನಿಯಮ, 1956ರ ಮೇರೆಗೆ ಅಥವಾ ಕಂಪನಿಗಳಿಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿನ ಮೇರೆಗೆ ಒಂದು ಅಥವಾ ಹೆಚ್ಚಿನ ಕಂಪನಿಗಳನ್ನು ರಚಿಸಬಹುದು;

(ಒ) ಈ ಅಧಿನಿಯಮದ ಮೂಲಕ ಅದಕ್ಕೆ ಪ್ರದತ್ತವಾದ ಅಥವಾ ವಿಧಿಸಲಾದ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅವಶ್ಯವಾಗಬಹುದಾಂಥ ಅಥವಾ ಅನುಕೂಲಕರವಾಗಬಹುದಾದಂಥ ಅಥವಾ ಪ್ರಾಸಂಗಿಕವಾಗಬಹುದಾದಂಥ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು; ಮತ್ತು

(ಪಿ) ಭಾರತದ ವಾಯು ಪ್ರದೇಶಕ್ಕೆ, ವಾಯು ಪ್ರದೇಶದಿಂದ ಮತ್ತು ಅದರ ಆಚೆಗೆ ವಿಮಾನದ ಸುರಕ್ಷಿತ ಮತ್ತು ದಕ್ಷಸಂಚಾರವನ್ನು ಖಚಿತಗೊಳಿಸಲು ಕೇಂದ್ರ ಸರ್ಕಾರವು ಅವಶ್ಯಕ ಅಥವಾ ಅಪೇಕ್ಷಣೀಯವೆಂದು ಪರ್ಯಾಲೋಚಿಸಿದ ಯಾವುದೇ ಇತರ ಪ್ರಕಾರ್ಯವನ್ನು ನೆರವೇರಿಸಬಹುದು.

(4) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1971 ಅಥವಾ ಈ ಅಧಿನಿಯಮದ 1ನೇ ಪ್ರಕರಣದ (3)ನೇ ಉಪಪ್ರಕರಣದ ಅಥವಾ ಯಾವುದೇ ಇತರ ಉಪಬಂಧದಲ್ಲಿ ಏನೇ ಅಡಕವಾಗಿದ್ದರೂ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ನಿರ್ದೇಶಿಸಿದರೆ, ಪ್ರಾಧಿಕಾರವು ಆ ಅಧಿನಿಯಮವು ಅನ್ವಯವಾಗುವಂಥಹ ವಿಮಾನ ನಿಲ್ದಾಣಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1971ರ 16ನೇ ಪ್ರಕರಣದ (2)ನೇ ಉಪಪ್ರಕರಣದ ಪರಂತುಕದಲ್ಲಿ ಉಲ್ಲೇಖಿಸಲಾದ ವಿಮಾನಯಾನ ಸೇವೆಗಳನ್ನು ಒದಗಿಸುವ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು.

(5) ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಅದು ವಿಮಾನ ಸಾರಿಗೆ ಸೇವೆಯ ಅಭಿವೃದ್ಧಿಗೆ ಮತ್ತು ಅಂಥ ಸೇವೆಯಲ್ಲಿ ದಕ್ಷತೆ, ಮಿತವ್ಯಯ ಮತ್ತು ಅದರ ಸುರಕ್ಷತೆಗೆ ಯುಕ್ತ ಗಮನ ನೀಡತಕ್ಕದ್ದು.

(6) ಈ ಪ್ರಕರಣದಲ್ಲಿ ಇರುವುದಾವುದೂ,–

(ಎ) ಈ ಅಧಿನಿಯಮವು ಅನ್ವಯವಾಗದಿರುವ ಯಾವುದೇ ಏರೋಡ್ರೊಮ್ ಸಂಬಂಧದಲ್ಲಿ [(4)ನೇ ಉಪಪ್ರಕರಣದಲ್ಲಿ ನಮೂದಿಸಲಾದ ಪ್ರಕಾರ್ಯ ಮತ್ತು ಅದರಿಂದ ಉದ್ಭವಿಸುವ ಕರ್ತವ್ಯಗಳಲ್ಲದ] ಯಾವುದೇ ಪ್ರಕಾರ್ಯ ಅಥವಾ ಕರ್ತವ್ಯವನ್ನು ನಿರ್ವಹಿಸುವಂತೆ ಪ್ರಾಧಿಕಾರದ ಮೇಲೆ ಬಾಧ್ಯತೆಯನ್ನು ವಿಧಿಸುವುದಾಗಿ;

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಉಪೇಕ್ಷಿಸಲು ಪ್ರಾಧಿಕಾರಕ್ಕೆ ಅಧಿಕಾರ ನೀಡಿರುವುದಾಗಿ; ಅಥವಾ

(ಸಿ) ಪ್ರಾಧಿಕಾರ ಅಥವಾ ಅದರ ಅಧಿಕಾರಿಗಳು ಅಥವಾ ಇತರ ನೌಕರರು ಇತರೇ ರೀತಿಯಲ್ಲಿ ಒಳಪಡದಿರುವಂಥ ಕರ್ತವ್ಯ ಅಥವಾ ಹೊಣೆಗಾರಿಕೆ ಸಂಬಂಧದಲ್ಲಿ ಯಾವುದೇ ವ್ಯವಹರಣೆಯನ್ನು ಹೂಡಲು ಯಾವನೇ ವ್ಯಕ್ತಿಗೆ ಅಧಿಕಾರ ನೀಡಿರುವುದಾಗಿ

– ಅರ್ಥೈಸತಕ್ಕದ್ದಲ್ಲ.

## ಅಧ್ಯಾಯ – IV
## ಸ್ವತ್ತು ಮತ್ತು ಕರಾರು

**13. ಕೇಂದ್ರ ಸರ್ಕಾರದ ಆಸ್ತಿಗಳು ಮತ್ತು ಹೊಣೆಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸುವುದು.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಿಂದ,–

(ಎ) ಅಂತಹ ದಿನಾಂಕದ ನಿಕಟ ಪೂರ್ವದಲ್ಲಿ ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಮತ್ತು ವೈಮಾನಿಕ ಸಂಪರ್ಕ ಕೇಂದ್ರದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಸಿವಿಲ್ ವಿಮಾನಯಾನ ಮಹಾನಿರ್ದೇಶಕನ ಆಡಳಿತದಲ್ಲಿರುವ ವಿಮಾನ ಸಂಚಾರ ಸೇವೆಗೆ ಸಂಬಂಧಿಸಿದ ಎಲ್ಲಾ ಸ್ವತ್ತುಗಳು ಮತ್ತು ಸಾಧನ ಸಾಮಗ್ರಿ ಮತ್ತು ವಿಮಾನ ಸಂಚಾರ ಮತ್ತು ಭೂ ಸಂಚಾರ ಸಹಾಯಕ ಸಾಮಗ್ರಿಗಳೂ ಸೇರಿ ಇತರೆ ಆಸ್ತಿಗಳು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು;

(ಬಿ) ಅಂತಹ ದಿನಾಂಕದ ನಿಕಟ ಪೂರ್ವದಲ್ಲಿ ಸಿವಿಲ್ ವಿಮಾನಯಾನ ತರಬೇತಿ ಕೇಂದ್ರ, ಅಲಹಾಬಾದ್ ಮತ್ತು ಅಗ್ನಿಶಾಮಕ ಸೇವಾ ತರಬೇತಿ ಶಾಲೆ, ಕಲ್ಕತ್ತ – ಇವುಗಳ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಸಿವಿಲ್ ವಿಮಾನಯಾನ ಮಹಾನಿರ್ದೇಶಕನ ಆಡಳಿತದಲ್ಲಿರುವ ಎಲ್ಲಾ ಸ್ವತ್ತುಗಳು ಮತ್ತು ಇತರೆ ಆಸ್ತಿಗಳು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು;

(ಸಿ) ಅಂತಹ ದಿನಾಂಕದ ನಿಕಟ ಪೂರ್ವದಲ್ಲಿ ಸಿವಿಲ್ ವಿಮಾನಯಾನ ಮಹಾ ನಿರ್ದೇಶಕನ ಒಡೆತನದಲ್ಲಿರುವ ಎಲ್ಲಾ ವಸತಿ ಕಟ್ಟಡಗಳು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

(ಡಿ) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ, ಸಿವಿಲ್ ವಿಮಾನಯಾನ ತರಬೇತಿ ಕೇಂದ್ರ ಮತ್ತು ಅಗ್ನಿಶಾಮಕ ಸೇವಾ ತರಬೇತಿ ಶಾಲೆ – ಇವುಗಳ ಉದ್ದೇಶಗಳಿಗಾಗಿ ಅಥವಾ ಅವುಗಳ ಸಂಬಂಧದಲ್ಲಿ ಅಂತಹ ದಿನಾಂಕದ ನಿಕಟ ಪೂರ್ವದಲ್ಲಿ ಕೇಂದ್ರ ಸರ್ಕಾರವು ವಹಿಸಿದ ಅಥವಾ ಅದರೊಂದಿಗೆ ಅಥವಾ ಅದಕ್ಕಾಗಿ ವಹಿಸಲಾದ ಎಲ್ಲಾ ಸಾಲಗಳು, ಬಾಧ್ಯತೆಗಳು ಮತ್ತು ಹೊಣೆಗಳು, ಮಾಡಿಕೊಳ್ಳಲಾದ ಎಲ್ಲಾ ಕರಾರುಗಳು ಮತ್ತು ಹಾಗೆ ಮಾಡಿಕೊಳ್ಳುವುದಾಗಿ ವಾಗ್ದಾನ ಮಾಡಿದ ಎಲ್ಲಾ ವಿಷಯಗಳು ಮತ್ತು ಕಾರ್ಯಗಳನ್ನು ಪ್ರಾಧಿಕಾರದ ಮೂಲಕ ಅಥವಾ ಪ್ರಾಧಿಕಾರದೊಂದಿಗೆ ಅಥವಾ ಅದಕ್ಕಾಗಿ ವಹಿಸಲಾಗಿರುವುದಾಗಿ, ಕರಾರು ಮಾಡಿಕೊಂಡಿರುವುದಾಗಿ ಮತ್ತು ವಾಗ್ದಾನ ಮಾಡಿರುವುದಾಗಿ ಭಾವಿಸತಕ್ಕದ್ದು;

(ಇ) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ, ಸಿವಿಲ್ ವಿಮಾನಯಾನ ತರಬೇತಿ ಕೇಂದ್ರ ಮತ್ತು ಅಗ್ನಿಶಾಮಕ ಸೇವಾ ತರಬೇತಿ ಶಾಲೆ – ಇವುಗಳ ಉದ್ದೇಶಗಳಿಗಾಗಿ ಅಥವಾ ಅವುಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಂತಹ ದಿನಾಂಕದವರೆಗೆ ವಹಿಸಿದ ಮತ್ತು ಆ ಸರ್ಕಾರವು ಬಂಡವಾಳ ವೆಚ್ಚವೆಂಬುದಾಗಿ ಘೋಷಿಸಿದ ಎಲ್ಲಾ ಆವರ್ತಕವಲ್ಲದ ವೆಚ್ಚವನ್ನು ಕೇಂದ್ರ ಸರ್ಕಾರವು ನೇಮಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಪ್ರಾಧಿಕಾರಕ್ಕೆ ಕೇಂದ್ರ ಸರ್ಕಾರವು ಒದಗಿಸಿದ ಬಂಡವಾಳವೆಂದು ಪರಿಗಣಿಸತಕ್ಕದ್ದು;

(ಎಫ್) ಅಂತಹ ದಿನಾಂಕದ ನಿಕಟಪೂರ್ವದಲ್ಲಿ ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ, ಸಿವಿಲ್ ವಿಮಾನಯಾನ ತರಬೇತಿ ಕೇಂದ್ರ ಮತ್ತು ಅಗ್ನಿಶಾಮಕ ಸೇವಾ ತರಬೇತಿ ಶಾಲೆ – ಇವುಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರಕ್ಕೆ

ಬರಬೇಕಾದ ಬಾಕಿ ಹಣದ ಮೊತ್ತವು ಪ್ರಾಧಿಕಾರಕ್ಕೆ ಬರಬೇಕಾದ ಬಾಕಿ ಮೊತ್ತ ಎಂಬುದಾಗಿ ಭಾವಿಸತಕ್ಕದ್ದು;

(ಜಿ) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ, ಸಿವಿಲ್ ವಿಮಾನಯಾನ ತರಬೇತಿ ಕೇಂದ್ರ ಮತ್ತು ಅಗ್ನಿಶಾಮಕ ಸೇವಾ ತರಬೇತಿ ಶಾಲೆ – ಇವುಗಳಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕಾಗಿ ಅಂತಹ ದಿನಾಂಕದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಅಥವಾ ಹೂಡಬಹುದಾಗಿದ್ದಂತಹ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಪ್ರಾಧಿಕಾರದ ಮೂಲಕ ಅಥವಾ ಅದರ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು.

(2) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಯಾವ ಸ್ವತ್ತುಗಳು, ಹಕ್ಕುಗಳು ಅಥವಾ ಹೊಣೆಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆ ಎಂಬ ಬಗ್ಗೆ ಅಥವಾ ಸಿವಿಲ್ ವಿಮಾನಯಾನ ಮಹಾ ನಿರ್ದೇಶಕನ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಯಾವ ನಿಯೋಜಿತರನ್ನು ಪ್ರಾಧಿಕಾರದಲ್ಲಿ ಪ್ರತಿನಿಯೋಜನೆಯ ಮೇಲಿರುವುದಾಗಿ ಪರಿಗಣಿಸಬೇಕು ಎಂಬ ಬಗ್ಗೆ ಯಾವುದೇ ವಿವಾದ ಅಥವಾ ಸಂದೇಹವು ಉದ್ಭವಿಸಿದರೆ, ಅಂತಹ ವಿವಾದ ಅಥವಾ ಸಂದೇಹವನ್ನು ಕೇಂದ್ರ ಸರ್ಕಾರವು ಪ್ರಾಧಿಕಾರದೊಡನೆ ಸಮಾಲೋಚಿಸಿ ತೀರ್ಮಾನಿಸತಕ್ಕದ್ದು ಮತ್ತು ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತೆ ಈ ಅಧಿನಿಯಮದ ಮೇರೆಗೆ ಪ್ರಾಧಿಕಾರದ ಪ್ರಕಾರ್ಯಗಳಿಗೆ ಸುಸಂಗತವಾದ ಸಿವಿಲ್ ವಿಮಾನಯಾನ ಮಹಾ ನಿರ್ದೇಶನಾಲಯದ ಅಂಥ ವ್ಯವಹಾರಗಳಿಗಾಗಿ ಅಥವಾ ಅವುಗಳ ಸಂಬಂಧದಲ್ಲಿ ಏಕೈಕವಾಗಿ ಅಥವಾ ಮುಖ್ಯವಾಗಿ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸಿವಿಲ್ ವಿಮಾನಯಾನ ಮಹಾನಿರ್ದೇಶಕನ ಅಧೀನದಲ್ಲಿ ಯಾವುದೇ ಪದಧಾರಣ ಮಾಡಿರುವ ಪ್ರತಿಯೊಬ್ಬ ನೌಕರನನ್ನು ಪ್ರಾಧಿಕಾರದಲ್ಲಿ ಪ್ರತಿನಿಯೋಜನೆಯ ಮೇಲಿರುವುದಾಗಿ ಪರಿಗಣಿಸತಕ್ಕದು. ಆದರೆ ಪ್ರಾಧಿಕಾರವು ರಚಿತವಾಗಿರದಿದ್ದರೆ, ಅವನು ಅಂಥ ಪದವನ್ನು ಯಾವ ಪದಾವಧಿಗಾಗಿ ಮತ್ತು ಪರಿಶ್ರಮ ಧನ, ರಜೆ, ಭವಿಷ್ಯನಿಧಿ, ನಿವೃತ್ತಿ ಅಥವಾ ಇತರ ಸೇವಾಂತ್ಯ ಲಾಭಗಳ ಸಂಬಂಧದಲ್ಲಿ ಯಾವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಧಾರಣ ಮಾಡಬಹುದಾಗಿದ್ದಿತೋ ಅದೇ ಪದಾವಧಿಗೆ ಮತ್ತು ಅಂಥವೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರದಲ್ಲಿ ತನ್ನ ಪದಧಾರಣ ಮಾಡತಕ್ಕದ್ದು ಮತ್ತು ಪ್ರಾಧಿಕಾರವು ಅಂಥ ನೌಕರನನ್ನು ಅದರ ಕ್ರಮಬದ್ಧ ಸೇವೆಯಲ್ಲಿ ಯುಕ್ತವಾಗಿ ಲೀನಗೊಳಿಸುವವರೆಗೆ ಅವನು ಹಾಗೆ ಪದಧಾರಣ ಮಾಡುವುದು ಮುಂದುವರೆಯತಕ್ಕದ್ದು:

ಪರಂತು, ಯಾವನೇ ಅಂತಹ ನೌಕರನು ಪ್ರಾಧಿಕಾರದಲ್ಲಿ ಪ್ರತಿನಿಯೋಜನೆಯ ಮೇಲೆ ಇರುವ ಅವಧಿಯಲ್ಲಿ, ಅದು ಅಂತಹ ಪ್ರತಿಯೊಬ್ಬ ನೌಕರನ ಸಂಬಂಧದಲ್ಲಿ, ಕೇಂದ್ರ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂತೆ ಅವನ ರಜೆ, ಸಂಬಳ, ನಿವೃತ್ತಿ ವೇತನ ಮತ್ತು ಉಪದಾನ – ಇವುಗಳ ಬಗ್ಗೆ ವಂತಿಗೆಯನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಯಾವನೇ ಅಂತಹ ನೌಕರನು ಕ್ರಮಬದ್ಧ ಸೇವೆಯಲ್ಲಿ ಲೀನಗೊಳಿಸುವ ಪ್ರಾಧಿಕಾರದ ಪ್ರಸ್ತಾವದ ಬಗ್ಗೆ, ಅದು ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ಸಮಯದೊಳಗೆ ಪ್ರಾಧಿಕಾರದ ಕ್ರಮಬದ್ಧ ನೌಕರನಾಗದಿರುವ ತನ್ನ ಇಚ್ಛೆಯನ್ನು ತಿಳಿಸಿದ್ದಲ್ಲಿ, ಅದು ಅವನನ್ನು ಆ ಸೇವೆಯಲ್ಲಿ ಲೀನಗೊಳಿಸತಕ್ಕದ್ದಲ್ಲ.

(4) ಕೈಗಾರಿಕಾ ವಿವಾದಗಳ ಅಧಿನಿಯಮ, 1947ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಈ ಪ್ರಕರಣದ ಮೇರೆಗೆ ಪ್ರಾಧಿಕಾರವು ಅದರ ಕ್ರಮಬದ್ಧ ಸೇವೆಯಲ್ಲಿ ಯಾವನೇ ನೌಕರನನ್ನು ಲೀನಗೊಳಿಸುವುದರಿಂದ ಅಂಥ ನೌಕರನು ಆ ಅಧಿನಿಯಮದ ಅಥವಾ ಇತರ ಕಾನೂನಿನ ಮೇರೆಗೆ ಯಾವುದೇ ಪರಿಹಾರಕ್ಕೆ ಅರ್ಹನಾಗತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಅಂಗೀಕರಿಸತಕ್ಕದ್ದಲ್ಲ.

**14. ಪ್ರಾಧಿಕಾರಕ್ಕಾಗಿ ಭೂಮಿಯನ್ನು ಕಡ್ಡಾಯವಾಗಿ ಆರ್ಜಿಸುವುದು.–** ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗೆ ಪ್ರಾಧಿಕಾರಕ್ಕೆ ಯಾವುದೇ ಭೂಮಿ ಅಗತ್ಯವಿದ್ದಲ್ಲಿ, ಅದು ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಿರುವುದೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಭೂಮಿಯನ್ನು ಭೂ ಆರ್ಜನಾ ಅಧಿನಿಯಮ, 1894 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಸಂವಾದಿ ಕಾನೂನಿನ ಉಪಬಂಧಗಳ ಮೇರೆಗೆ ಪ್ರಾಧಿಕಾರಕ್ಕಾಗಿ ಆರ್ಜಿಸಬಹುದು.

**15. ಪ್ರಾಧಿಕಾರವು ಕರಾರುಗಳನ್ನು ಮಾಡಿಕೊಳ್ಳುವುದು.–** 16ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳ ನಿರ್ವಹಣೆಗಾಗಿ ಅವಶ್ಯವಿರುವ ಯಾವುದೇ ಕರಾರನ್ನು ಮಡಿಕೊಳ್ಳುವುದಕ್ಕೆ ಅಥವಾ ನಿರ್ವಹಿಸುವುದಕ್ಕೆ ಸಕ್ಷಮವಾಗಿರತಕ್ಕದ್ದು.

**16. ಪ್ರಾಧಿಕಾರದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.–** (1) ಪ್ರಾಧಿಕಾರದ ಪರವಾಗಿ, ಪ್ರತಿಯೊಂದು ಕರಾರನ್ನು ಅಧ್ಯಕ್ಷನು ಅಥವಾ ಪ್ರಾಧಿಕಾರದಿಂದ ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕಾರ ಹೊಂದಿರಬಹುದಾದಂಥ ಪ್ರಾಧಿಕಾರದ ಇತರ ಸದಸ್ಯನು ಅಥವಾ ಅಧಿಕಾರಿಯು ಮಾಡಿಕೊಳ್ಳತಕ್ಕದ್ದು ಮತ್ತು ವಿನಿಮಯಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕರಾರುಗಳಿಗೆ ಅಥವಾ ಕರಾರುಗಳ ವರ್ಗಕ್ಕೆ ಪ್ರಾಧಿಕಾರದ ಸಾಮಾನ್ಯ ಮೊಹರನ್ನು ಹಾಕಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಆದೇಶದ ಮೂಲಕ, ಈ ಬಗ್ಗೆ ನಿಗದಿಪಡಿಸಬಹುದಾದಂಥ ಮೌಲ್ಯ ಅಥವಾ ಮೊಬಲಗನ್ನು ಮೀರುವ ಯಾವುದೇ ಕರಾರನ್ನು ಪ್ರಾಧಿಕಾರವು ಮುಂಚಿತವಾಗಿ ಅನುಮೋದಿಸಿರುವ ಹೊರತು ಅದನ್ನು ಮಾಡಿಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಸ್ಥಿರಸ್ವತ್ತಿನ ಆರ್ಜನೆ ಅಥವಾ ಮಾರಾಟಕ್ಕೆ ಅಥವಾ ಮೂವತ್ತು ವರ್ಷಗಳ ಅವಧಿಯನ್ನು ಮೀರುವ ಅವಧಿಗೆ ಯಾವುದೇ ಅಂಥ ಸ್ವತ್ತಿನ ಗುತ್ತಿಗೆಗೆ ಯಾವುದೇ ಕರಾರನ್ನು, ಮತ್ತು ಕೇಂದ್ರ ಸರ್ಕಾರವು ಈ ಬಗ್ಗೆ ಕಾಲಕಾಲಕ್ಕೆ ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಮೌಲ್ಯ ಅಥವಾ ಮೊಬಲಗನ್ನು ಮೀರುವ ಯಾವುದೇ ಕರಾರನ್ನು ಕೇಂದ್ರ ಸರ್ಕಾರವು ಮುಂಚಿತವಾಗಿ ಅನುಮೋದಿಸಿರುವ ಹೊರತು ಮಾಡಿಕೊಳ್ಳತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಮಾಡಿಕೊಳ್ಳತಕ್ಕ ಯಾವುದೇ ಕರಾರಿನ ನಮೂನೆ ಅಥವಾ ರೀತಿಯು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳು ಮತ್ತು ವಿನಿಯಮಗಳಿಗನುಸಾರವಾಗಿರದಂಥ ಯಾವುದೇ ಕರಾರಿಗೆ ಪ್ರಾಧಿಕಾರವು ಬದ್ಧವಾಗತಕ್ಕದ್ದಲ್ಲ.

## ಅಧ್ಯಾಯ – V
## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**17. ಫೀಜು, ಬಾಡಿಗೆ ಮುಂತಾದವುಗಳನ್ನು ವಿಧಿಸುವುದಕ್ಕೆ ಪ್ರಾಧಿಕಾರದ ಅಧಿಕಾರ.–** (1) ಪ್ರಾಧಿಕಾರವು,–

(i) ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು,–

(ಎ) ಯಾವುದೇ ಏರೋಡ್ರೊಮ್ ಅಥವಾ ಹೆಲಿಕಾಪ್ಟರ್ ನಿಲ್ದಾಣದಲ್ಲಿ ವಿಮಾನವನ್ನು ಭೂಮಿಗೆ ಇಳಿಸಲು, ಸುರಕ್ಷಿತ ಸ್ಥಳದಲ್ಲಿಡಲು ಅಥವಾ ನಿಲ್ದಾಣದಲ್ಲಿ ಬಿಡಲು ಅಥವಾ ವಿಮಾನದ ಕಾರ್ಯಾಚರಣೆಗೆ ಸಂಬಂಧಿಸಿ ಕೋರಲಾದ ಯಾವುದೇ ಇತರ ಸೇವೆಗಳು ಅಥವಾ ಸೌಲಭ್ಯಗಳಿಗಾಗಿ;

**ವಿವರಣೆ:–** ಈ ಉಪಖಂಡದಲ್ಲಿ "ವಿಮಾನ" ಎಂಬ ಪದವು ಒಕ್ಕೂಟದ ಯಾವುದೇ ಸಶಸ್ತ್ರದಳಕ್ಕೆ ಸೇರಿದ ವಿಮಾನವನ್ನು ಒಳಗೊಳ್ಳುವುದಿಲ್ಲ ಮತ್ತು "ವಿಮಾನ ಕಾರ್ಯಾಚರಣೆಗಳು" ಎಂಬ ಪದವು ಸದರಿ ಬಲಕ್ಕೆ ಸೇರಿದ ಯಾವುದೇ ವಿಮಾನದ ಕಾರ್ಯಚರಣೆಗಳನ್ನು ಒಳಗೊಳ್ಳುವುದಿಲ್ಲ;

(ಬಿ) ಯಾವುದೇ ಏರೋಡ್ರೊಮ್‌ನಲ್ಲಿ ಮತ್ತು ಯಾವುದೇ ವೈಮಾನಿಕ ಸಂಪರ್ಕ ಕೇಂದ್ರದಲ್ಲಿ ವಿಮಾನ ಸಂಚಾರ ಸೇವೆಗಳು, ಸುರಕ್ಷಾ ಸೇವೆಗಳು, ವೈಮಾನಿಕ ಸಂಪರ್ಕಗಳು ಮತ್ತು ವಿಮಾನ ಯಾನ ಸಾಧನಗಳು ಮತ್ತು ಹವಾಮಾನ ಸೇವೆಗಳು – ಇವುಗಳನ್ನು ಒದಗಿಸುವುದಕ್ಕಾಗಿ;

(ಸಿ) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ಹೆಲಿಕಾಪ್ಟರ್ ನಿಲ್ದಾಣದಲ್ಲಿ ಪ್ರಯಾಣಿಕರು ಮತ್ತು ಸಂದರ್ಶಕರಿಗೆ ಒದಗಿಸುವ ಸೌಕರ್ಯಗಳಿಗಾಗಿ;

(ಡಿ) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ಹೆಲಿಕಾಪ್ಟರ್ ನಿಲ್ದಾಣದಲ್ಲಿ ವ್ಯಕ್ತಿಗಳು ಉಪಯೋಗಿಸಿಕೊಳ್ಳಲು ಮತ್ತು ಅನುಭವಿಸಲು ಪ್ರಾಧಿಕಾರವು ಒದಗಿಸಿದ ಸೌಲಭ್ಯಗಳು ಮತ್ತು ಇತರ ಸೇವೆಗಳಿಗಾಗಿ

– ಫೀಜುಗಳನ್ನು ಅಥವಾ ಬಾಡಿಗೆಯನ್ನು ವಿಧಿಸಬಹುದು.

(ii) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ಕೊಡಬಹುದಾದ ಸೂಚನೆಗಳಿಗೆ ಯುಕ್ತ ಗಮನಕೊಟ್ಟು, ಯಾವುದೇ ಏರೋಡ್ರೊಮ್ ಅಥವಾ ಹೆಲಿಕಾಪ್ಟರ್ ನಿಲ್ದಾಣದಲ್ಲಿ ಯಾವುದೇ ವ್ಯಾಪಾರ ಅಥವಾ ವ್ಯವಹಾರವನ್ನು ನಡಸಲು ಪ್ರಾಧಿಕಾರದಿಂದ ಯಾವುದೇ ಸೌಲಭ್ಯವನ್ನು ಪಡೆದು ವ್ಯಕ್ತಿಗಳಿಗೆ ಫೀಜುಗಳು ಅಥವಾ ಬಾಡಿಗೆಯನ್ನು ವಿಧಿಸಬಹುದು.

(2) ಪ್ರಾಧಿಕಾರವು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1971 – ಇದು ಅನ್ವಯವಾಗುವ ವಿಮಾನ ನಿಲ್ದಾಣಗಳಲ್ಲಿ 12ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿಮಾನಯಾನ ಸೇವೆಗಳನ್ನು ಒದಗಿಸುವುದಕ್ಕಾಗಿ ಸಹ ಫೀಜುಗಳನ್ನು ವಿಧಿಸಬಹುದು.

**18. ಕೇಂದ್ರ ಸರ್ಕಾರದಿಂದ ಪ್ರಾಧಿಕಾರಕ್ಕೆ ಹೆಚ್ಚಿನ ಬಂಡವಾಳ ಮತ್ತು ಅನುದಾನ.–** ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಮಾಡಿದ ಯುಕ್ತ ವಿನಿಯೋಗದ ತರುವಾಯ,–

(ಎ) 13ನೇ ಪ್ರಕರಣದ (1)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಒದಗಿಸಲಾದ ಬಂಡವಾಳಕ್ಕೆ ಹೆಚ್ಚಿಗೆಯಾಗಿ ಈ ಅಧಿನಿಯಮದ ಮೇರೆಗೆ ಅಥವಾ ಸರ್ಕಾರವು ನಿರ್ಧರಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಯಾವುದೇ ಉದ್ದೇಶಕ್ಕಾಗಿ ಅದರ ಪ್ರಕಾರ್ಯಗಳ ನಿರ್ವಹಣೆಗೆ ಅದಕ್ಕೆ ಅವಶ್ಯವಾಗಬಹುದಾದ ಯಾವುದೇ ಬಂಡವಾಳವನ್ನು ಒದಗಿಸಬಹುದು;

(ಬಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಅವಶ್ಯವೆಂದು ಆ ಸರ್ಕಾರವು ಪರ್ಯಾಲೋಚಿಸಬಹುದಾದಂಥ ಹಣದ ಮೊತ್ತವನ್ನು ಸಾಲಗಳು ಅಥವಾ ಅನುದಾನಗಳ ರೂಪದಲ್ಲಿ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

**19. ಪ್ರಾಧಿಕಾರದ ನಿಧಿ.–** (1) ಪ್ರಾಧಿಕಾರವು ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರದ ಎಲ್ಲಾ ಸ್ವೀಕೃತಿಗಳನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಪ್ರಾಧಿಕಾರದ ಎಲ್ಲಾ ಸಂದಾಯಗಳನ್ನು ಆ ನಿಧಿಯಿಂದ ಮಾಡತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪ್ರಾಧಿಕಾರದ ಎಲ್ಲಾ ಆಡಳಿತ ವೆಚ್ಚಗಳನ್ನು ಮತ್ತು ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಲಾದ ವಿಷಯಗಳು ಅಥವಾ ಉದ್ದೇಶಗಳಿಗೆ ಭರಿಸಲು ಅದು ಸೂಕ್ತವೆಂದು ಆಲೋಚಿಸುವಂಥ ಮೊತ್ತಗಳನ್ನು ಖರ್ಚು ಮಾಡುವುದಕ್ಕೆ ಪ್ರಾಧಿಕಾರವು ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಮೊತ್ತವನ್ನು ಪ್ರಾಧಿಕಾರದ ನಿಧಿಯಿಂದ ಮಾಡಲಾದ ವೆಚ್ಚವೆಂಬುದಾಗಿ ಪರಿಗಣಿಸತಕ್ಕದ್ದು.

(3) ಪ್ರಾಧಿಕಾರದ ಜಮೆಯಲ್ಲಿರುವ ಮತ್ತು (2)ನೇ ಉಪಪ್ರಕರಣದಲ್ಲಿ ಉಪಬಂಧಿಸಲಾದಂತೆ ಆ ಕೂಡಲೇ ವಿನಿಯೋಗಿಸಲಾಗದಂಥ ಎಲ್ಲಾ ಹಣವನ್ನು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸ ಬಹುದಾದಂಥ ಷರತ್ತುಗಳಿಗೊಳಪಟ್ಟು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಅಥವಾ ಅಂಥ ಅನುಸೂಚಿತ ಬ್ಯಾಂಕು ಅಥವಾ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದಲ್ಲಿ "ಅನುಸೂಚಿತ ಬ್ಯಾಂಕು" ಎಂಬುದು ಭಾರತ ರಿಜರ್ವ್ ಬ್ಯಾಂಕು ಅಧಿನಿಯಮ, 1934ರ 2ನೇ ಪ್ರಕರಣದ (ಇ) ಖಂಡದಲ್ಲಿರುವಂಥ ಅರ್ಥವನ್ನೇ ಹೊಂದಿರುತ್ತದೆ.

**20. ಹೆಚ್ಚುವರಿ ನಿಧಿಗಳ ಹಂಚಿಕೆ.–** (1) ಪ್ರಾಧಿಕಾರವು, ಯಾವುದೇ ಏರೋಡ್ರೋಮ್‌ನಲ್ಲಿನ ಹಾಲಿ ಸೌಲಭ್ಯಗಳ ಅಥವಾ ಸೇವೆಗಳ ವಿಸ್ತರಣೆಯ ಅಥವಾ ಹೊಸ ಸೌಲಭ್ಯಗಳ ಅಥವಾ ಸೇವೆಗಳ ಸೃಜನೆಯ ಉದ್ದೇಶಕ್ಕಾಗಿ ಅಥವಾ ಕ್ಷಣಿಕ ಕಾರಣಗಳಿಂದ ಆದಾಯಗಳ ಯಾವುದೇ ತಾತ್ಕಾಲಿಕ ಇಳಿವರಿ ಅಥವಾ ಖರ್ಚು ವೆಚ್ಚದ ಹೆಚ್ಚುವರಿಯ ಬಗ್ಗೆ ಏರ್ಪಾಟು ಮಾಡುವ ಉದ್ದೇಶಕ್ಕಾಗಿ ಅಥವಾ ಬೆಂಕಿಯ ಆಕಸ್ಮಿಕ, ಚಂಡಮಾರುತ,

ವಿಮಾನ ಅಪಘಾತ ಅಥವಾ ಇತರೆ ವಿಧವಾದ ಅಪಘಾತಗಳಿಂದ ಉಂಟಾಗುವ ನಷ್ಟ ಮತ್ತು ಹಾನಿಗಳ ಸಂಬಂಧದಲ್ಲಿ ಪ್ರತಿಸ್ಥಾಪನೆಗಾಗಿ ಅಥವಾ ವೆಚ್ಚವನ್ನು ಭರಿಸುವುದಕ್ಕಾಗಿ ಅಥವಾ ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳ ನಿರ್ವಹಣೆಯಲ್ಲಿನ ಯಾವುದೇ ಕೃತ್ಯದಿಂದ ಅಥವಾ ಲೋಪದಿಂದ ಉಂಟಾಗುವ ಯಾವುದೇ ಹೊಣೆಯನ್ನು ಭರಿಸುವುದಕ್ಕಾಗಿ, ಕಾಲಕಾಲಕ್ಕೆ ಅದು ಯುಕ್ತವೆಂದು ಯೋಚಿಸುವಂಥ ಮೊಬಲಗುಗಳನ್ನು ಮೀಸಲು ನಿಧಿ ಅಥವಾ ನಿಧಿಗಳೆಂದು ಪ್ರತ್ಯೇಕವಾಗಿ ಇಡಬಹುದು:

ಪರಂತು, ಒಂದು ಅಥವಾ ಹೆಚ್ಚು ನಿರ್ದಿಷ್ಟ ಉದ್ದೇಶಗಳಿಗಾಗಿ ನಿರ್ದಿಷ್ಟ ಮೀಸಲು ನಿಧಿಗಳನ್ನು ಸ್ಥಾಪಿಸಲು ಪ್ರಾಧಿಕಾರವು ಹೊಂದಿರುವ ಹಕ್ಕಿಗೆ ಬಾಧಕವಾಗದಂತೆ ಅದು ಒಂದು ಸಾಮಾನ್ಯ ಮೀಸಲು ನಿಧಿಯನ್ನು ಸ್ಥಾಪಿಸಲು ಸಹ ಅಧಿಕಾರ ಹೊಂದಿರತಕ್ಕದ್ದು:

ಮತ್ತೂ ಪರಂತು, ನಿರ್ದಿಷ್ಟ ಮತ್ತು ಸಾಮಾನ್ಯ ಮೀಸಲು ನಿಧಿಗಳ ಪೈಕಿ ಪ್ರತಿಯೊಂದರ ಅಥವಾ ಯಾವುದೇ ಒಂದರ ಸಂಬಂಧದಲ್ಲಿ ವಾರ್ಷಿಕವಾಗಿ ಪ್ರತ್ಯೇಕವಾಗಿಡಲಾದ ಮೊತ್ತಗಳು ಮತ್ತು ಯಾವುದೇ ಸಮಯದಲ್ಲಿ ಅಂಥ ಮೊತ್ತಗಳ ಒಟ್ಟು ಮೊಬಲಗು ಕೇಂದ್ರ ಸರ್ಕಾರವು ಈ ಬಗ್ಗೆ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಮಿತಿಗಳನ್ನು ಮಿರತಕ್ಕದ್ದಲ್ಲ.

(2) ಅಂಥ ಮೀಸಲು ನಿಧಿ ಅಥವಾ ನಿಧಿಗಳು ಮತ್ತು ವಸೂಲಾಗದ ಮತ್ತು ಸಂದೇಹಾಸ್ಪದವಾದ ಸಾಲಗಳು, ಆಸ್ತಿಗಳಲ್ಲಿನ ಇಳಿತಾಯ – ಇವುಗಳಿಗೆ ಮತ್ತು ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನೋಂದಾಯಿಸಲಾದ ಮತ್ತು ನಿಗಮಿತಗೊಳಿಸಿದ ಕಂಪನಿಗಳು ಸಾಮಾನ್ಯವಾಗಿ ಏರ್ಪಾಟು ಮಾಡುವ ಎಲ್ಲಾ ಇತರ ವಿಷಯಗಳಿಗೆ ಏರ್ಪಾಟು ಮಾಡಿದ ತರುವಾಯ ಪ್ರಾಧಿಕಾರವು ಅದರ ವಾರ್ಷಿಕ ನಿವ್ವಳ ಲಾಭಗಳ ಶಿಲ್ಕನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

**21. ಚಟುವಟಿಕೆಗಳ ಕಾರ್ಯಕ್ರಮ ಮತ್ತು ಆರ್ಥಿಕ ಅಂದಾಜುಗಳನ್ನು ಸಲ್ಲಿಸುವುದು.–** (1) ಪ್ರಾಧಿಕಾರವು, ಪ್ರತಿ ಆರ್ಥಿಕ ವರ್ಷ ಪ್ರಾರಂಭವಾಗುವ ಮೊದಲು, ಮುಂಬರುವ ಆರ್ಥಿಕ ವರ್ಷದಲ್ಲಿನ ತನ್ನ ಚಟುವಟಿಕೆಗಳ ಕಾರ್ಯಕ್ರಮದ ವಿವರಣಾ ಪಟ್ಟಿಯನ್ನು ಹಾಗೂ ಆ ಸಂಬಂಧದಲ್ಲಿ ಒಂದು ಆರ್ಥಿಕ ಅಂದಾಜನ್ನು ಸಿದ್ಧಪಡಿಸತಕ್ಕದ್ದು.

(2) 1ನೇ ಉಪಪ್ರಕರಣದ ಮೇರೆಗೆ ಸಿದ್ಧಪಡಿಸಲಾದ ವಿವರಣಾ ಪಟ್ಟಿಯನ್ನು, ಪ್ರತಿ ಆರ್ಥಿಕ ವರ್ಷದ ಪ್ರಾರಂಭಕ್ಕೆ ಮೊದಲು ಮೂರು ತಿಂಗಳಿಗಿಂತ ಕಡಿಮೆಯಿಲ್ಲದಂತೆ, ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

(3) ಪ್ರಾಧಿಕಾರದ ಆ ವಿವರಣಾ ಪಟ್ಟಿ ಮತ್ತು ಆರ್ಥಿಕ ಅಂದಾಜುಗಳನ್ನು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಪ್ರಾಧಿಕಾರವು ಪರಿಷ್ಕರಿಸಬಹುದು.

**22. ನಿಧಿಗಳ ಹೂಡಿಕೆ.–** ಪ್ರಾಧಿಕಾರವು, ಯಾವುದೇ ಮೀಸಲು ನಿಧಿ ಸೇರಿದಂತೆ ತನ್ನ ನಿಧಿಗಳನ್ನು ಕೇಂದ್ರ ಸರ್ಕಾರದ ಭದ್ರತೆಗಳಲ್ಲಿ ಅಥವಾ ನಿಯಮಿಸಬಹುದಾದಂಥ ಇತರೆ ರೀತಿಯಲ್ಲಿ ಹೂಡಬಹುದು.

**23. ಪ್ರಾಧಿಕಾರವು ಸಾಲ ತೆಗೆದುಕೊಳ್ಳುವ ಅಧಿಕಾರಗಳು.–** ಪ್ರಾಧಿಕಾರವು ಕೇಂದ್ರ ಸರ್ಕಾರದ ಸಮ್ಮತಿ ಪಡೆದು ಅಥವಾ ಕೇಂದ್ರ ಸರ್ಕಾರವು ತನಗೆ ನೀಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ನಿಬಂಧನೆಗಳಿಗನುಸಾರವಾಗಿ ಈ ಅಧಿನಿಯಮದ ಮೇರೆಗೆ ತನ್ನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳ ನಿರ್ವಹಣೆಗಾಗಿ ಅದು ಸೂಕ್ತವೆಂದು ಭಾವಿಸಬಹುದಾದಂಥ ಬಂಧ ಪತ್ರಗಳು, ಡಿಬೆಂಚರುಗಳು ಅಥವಾ ಇತರೆ ಲಿಖಿತ ಪತ್ರ ನೀಡುವ ಮೂಲಕ ಯಾವುದೇ ಮೂಲದಿಂದ ಹಣವನ್ನು ಸಾಲವಾಗಿ ಪಡೆಯಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಪಡೆದ ಸಾಲಗಳ ಸಂಬಂಧದಲ್ಲಿ ಅಸಲಿನ ಮರು ಸಂದಾಯ ಮತ್ತು ಅದರ ಮೇಲಿನ ಬಡ್ಡಿಯ ಸಂದಾಯವನ್ನು ಕೇಂದ್ರ ಸರ್ಕಾರವು, ಅದು ಸೂಕ್ತವೆಂದು ಯೋಚಿಸುವಂಥ ರೀತಿಯಲ್ಲಿ ಖಾತರಿಗೊಳಿಸಬಹುದು.

(3) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರೂಪಿಸಬಹುದಾದಂಥ ಪರಿಮಿತಿಗಳಿಗೊಳಪಟ್ಟು, ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಅದಕ್ಕೆ ಅವಶ್ಯಕವಾಗಬಹುದಾದಂಥ ಮೊಬಲಗುಗಳನ್ನು ತಾತ್ಕಾಲಿಕವಾಗಿ ಓವರ್‌ಡ್ರಾಫ್ಟ್ ಮೂಲಕ ಅಥವಾ ಇತರೆ ರೀತಿಯಲ್ಲಿ ಸಾಲವಾಗಿ ಪಡೆದುಕೊಳ್ಳಬಹುದು.

**24. ಲೆಕ್ಕಪತ್ರಗಳ ಮತ್ತು ಲೆಕ್ಕ ಪರಶೋಧನೆ.–** (1) ಪ್ರಾಧಿಕಾರವು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳನ್ನು ಇಡತಕ್ಕದು ಮತ್ತು ಲಾಭ ಹಾಗೂ ನಷ್ಟದ ಲೆಕ್ಕಗಳು ಮತ್ತು ಆಯವ್ಯಯ ಪಟ್ಟಿಯು ಸೇರಿದಂತೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು.

(2) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಪ್ರಾಧಿಕಾರದ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ಪರಿಶೋಧಿಸತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಅವನು ವಹಿಸಿದ ವೆಚ್ಚವನ್ನು ಪ್ರಾಧಿಕಾರವು ಅವನಿಗೆ ಸಂದಾಯ ಮಾಡತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳ ಪರಿಶೋಧನೆಯ ಸಂಬಂಧದಲ್ಲಿ ಅವನು ನೇಮಕ ಮಾಡಿರುವ ಯಾವನೇ ವ್ಯಕ್ತಿಯು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಪಟ್ಟಂತೆ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು, ಮತ್ತು ವಿಶೇಷವಾಗಿ ಅವರು ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು, ದಸ್ತಾವೇಜುಗಳು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಯಾವನೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅದಕ್ಕೆ ಸಂಬಂಧಪಟ್ಟ ಲೆಕ್ಕಪರಿಶೋಧನಾ ವರದಿ ಸಹಿತ ವಾರ್ಷಿಕವಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಆ ಸರ್ಕಾರವು ಸಂಸತ್ತಿನ ಉಭಯ ಸದನದ ಮುಂದೆ ಅದನ್ನು ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ – VI
## ಸಂಕೀರ್ಣ

**25. ವಾರ್ಷಿಕ ವರದಿಯನ್ನು ಸಲ್ಲಿಸುವುದು.–** (1) ಪ್ರಾಧಿಕಾರವು, ಪ್ರತಿ ಆರ್ಥಿಕ ವರ್ಷವು ಮುಕ್ತಾಯಗೊಂಡ ತರುವಾಯ ಸಾಧ್ಯವಾದಷ್ಟು ಬೇಗನೆ, ಆ ಆರ್ಥಿಕ ವರ್ಷದಲ್ಲಿ ತನ್ನ ಚಟುವಟಿಕೆಗಳನ್ನು ವಿವರಿಸುವ ವರದಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಆ ವರದಿಯು, ಮುಂದಿನ ಆರ್ಥಿಕ ವರ್ಷದಲ್ಲಿ ಪ್ರಾಧಿಕಾರವು ಕೈಗೊಳ್ಳಬಹುದಾದಂಥ ಚಟುವಟಿಕೆಗಳ ವಿವರವನ್ನು ಸಹ ಒದಗಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ತನಗೆ ವರದಿಯನ್ನು ಸಲ್ಲಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಆ ವರದಿಯನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**26. ಪ್ರತ್ಯಾಯೋಜನೆ.–** ಪ್ರಾಧಿಕಾರವು, ತಾನು ಅವಶ್ಯವೆಂದು ಭಾವಿಸಬಹುದಾದಂತೆ, ಈ ಅಧಿನಿಯಮದ ಮೇರೆಗಿನ (38ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳೇನಾದರೂ ಇದ್ದಲ್ಲಿ, ಅವುಗಳಿಗೆ ಒಳಪಟ್ಟು ಅಧ್ಯಕ್ಷನಿಗೆ ಅಥವಾ ಯಾವನೇ ಇತರ ಸದಸ್ಯನಿಗೆ ಅಥವಾ ಪ್ರಾಧಿಕಾರದ ಯಾವನೇ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**27. ಪ್ರಾಧಿಕಾರದ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣನ.–** ಪ್ರಾಧಿಕಾರದ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು,, ಅಧ್ಯಕ್ಷನ ಅಥವಾ ಈ ಬಗ್ಗೆ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವನೇ ಇತರ ಸದಸ್ಯನ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಪ್ರಾಧಿಕಾರವು ನಿರ್ವಹಿಸಿದ ಎಲ್ಲಾ ಇತರ ಲಿಖಿತಗಳನ್ನು ಪ್ರಾಧಿಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

**28. ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು.–** ಪ್ರಾಧಿಕಾರದ ಎಲ್ಲಾ ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ ಅಥವಾ ವಿನಿಯಮಗಳ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುವರೆಂದು ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಮಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**29. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮಗಳಿಗನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕ್ರಮದ ಬಗ್ಗೆ ಅಥವಾ ಯಾವುದೇ ಏರೋಡ್ರೋಮ್‌ಗಳ, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ ಅಥವಾ ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರ ಪೂರ್ಣ ನಿಯಂತ್ರಣದಲ್ಲಿರುವ ಯಾವುದೇ ವಸ್ತುಗಳಲ್ಲಿನ ಯಾವುದೇ ನ್ಯೂನತೆಯ ಪರಿಣಾಮದಿಂದಾಗಿ ಯಾವುದೇ ವಿಮಾನ ಅಥವಾ ವಾಹನಕ್ಕೆ ಉಂಟಾದ ಯಾವುದೇ ಹಾನಿಯ ಬಗ್ಗೆ ಪ್ರಾಧಿಕಾರದ ವಿರುದ್ಧ ಅಥವಾ ಪ್ರಾಧಿಕಾರದ ಯಾವನೇ ಸದಸ್ಯ ಅಥವಾ ಯಾವನೇ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ. .

**30. ಕಳೆದುಹೋದ ಸ್ವತ್ತಿನ ಅಭಿರಕ್ಷೆ ಮತ್ತು ವಿಲೆ.–** ಸರಿಯಾದ ಅಭಿರಕ್ಷೆ ಇಲ್ಲದ ಕಾರಣ, ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರ ಸಮಗ್ರ ನಿಯಂತ್ರಣದಲ್ಲಿರುವ ಯಾವುದೇ ಆವರಣದಲ್ಲಿ ಯಾವುದೇ ಅಂಥ ಆವರಣದಲ್ಲಿರುವ ಯಾವುದೇ ವಿಮಾನದಲ್ಲಿ ಕಂಡುಬಂದಂತಹ ಯಾವುದೇ ಸ್ವತ್ತಿನ ಸುರಕ್ಷಿತ ಅಭಿರಕ್ಷೆ ಮತ್ತು ವಾಪಸಾತಿಯನ್ನು ಖಚಿತಪಡಿಸಲು ಪ್ರಾಧಿಕಾರವು ಈ ಬಗ್ಗೆ ರಚಿಸಬಹುದಾದಂಥ ವಿನಿಯಮಗಳಿಗೊಳಪಟ್ಟು ವ್ಯವಸ್ಥೆ ಮಾಡತಕ್ಕದ್ದು.

**31. ಆದಾಯ ತೆರಿಗೆಗೆ ಸಂಬಂಧಿಸಿದ ಉಪಬಂಧಗಳು.–** ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ ಅಥವಾ ಆದಾಯ ತೆರಿಗೆಗೆ ಅಥವಾ ಆದಾಯ, ಲಾಭ ಅಥವಾ ಗಳಿಕೆ ಇವುಗಳ ಮೇಲಿನ ಯಾವುದೇ ಇತರ ತೆರಿಗೆಗೆ ಸಂಬಂಧಪಟ್ಟ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯ ಉದ್ದೇಶಕ್ಕಾಗಿ ಆದಾಯ ತೆರಿಗೆ ಅಧಿನಿಯಮ, 1961ರ ಅರ್ಥ ವ್ಯಾಪ್ತಿಯಲ್ಲಿ ಪ್ರಾಧಿಕಾರವನ್ನು ಒಂದು ಕಂಪನಿಯಾಗಿ ಭಾವಿಸತಕ್ಕದ್ದು ಮತ್ತು ಅದರ ಆದಾಯ, ಲಾಭ ಮತ್ತು ಗಳಿಕೆಗಳ ಅನುಸಾರವಾಗಿ ಅದು ತೆರಿಗೆಗೆ ಬದ್ಧವಾಗತಕ್ಕದ್ದು.

**32. ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರದ ಅಧಿಕಾರ.–** ಪ್ರಾಧಿಕಾರವು, ಯಾವನೇ ವ್ಯಕ್ತಿಯ ಪರವಾಗಿ ಪ್ರಾಧಿಕಾರ ಮತ್ತು ಸಂಬಂಧಪಟ್ಟ ವ್ಯಕ್ತಿಯ ನಡುವೆ ಒಪ್ಪಂದ ಮಾಡಿಕೊಳ್ಳಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ನಿರ್ವಹಿಸಬೇಕಾಗಿರುವ ಯಾವುದೇ ಕಾಮಗಾರಿಗಳು ಅಥವಾ ಸೇವೆಗಳು ಅಥವಾ ಯಾವುದೇ ವರ್ಗದ ಕಾಮಗಾರಿಗಳು ಅಥವಾ ಸೇವೆಗಳನ್ನು ಕೈಗೊಳ್ಳಲು ಒಪ್ಪಿಕೊಳ್ಳಬಹುದು.

**33. ನಿರ್ದೇಶನಗಳನ್ನು ನೀಡಲು ಅಧಿಕಾರ.–** (1) ಪ್ರಾಧಿಕಾರವು ಅಥವಾ ಈ ಬಗ್ಗೆ ಅದು ವಿಶೇಷವಾಗಿ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು, ವಿಮಾನ ಅಧಿನಿಯಮ, 1934ರ ಉಪಬಂಧಗಳ ಮತ್ತು ಅದರ ಮೇರೆಗಿನ ನಿಯಮಗಳ ಮತ್ತು ಆ ಅಧಿನಿಯಮದ 5ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್), (ಹೆಚ್), (ಐ), (ಜೆ), (ಕೆ), (ಎಂ), (ಪಿ), (ಕ್ಯೂ) ಮತ್ತು (ಆರ್) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಗಳ ಸಂಬಂಧದಲ್ಲಿ ವಿಮಾನ ಕಾರ್ಯಚರಣೆಯಲ್ಲಿ ತೊಡಗಿರುವ ಅಥವಾ ಯಾವುದೇ ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವನ್ನು ಉಪಯೋಗಿಸುತ್ತಿರುವ ಯಾವನೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ನಿರ್ದೇಶನಗಳನ್ನು

ನೀಡುವುದು ಭಾರತದ ಭದ್ರತೆಯ ಹಿತಾಸಕ್ತಿಗಾಗಿ ಅಥವಾ ವಿಮಾನ ಸುರಕ್ಷತೆಯ ಭದ್ರತೆಯನ್ನು ಖಚಿತಪಡಿಸುವುದಕ್ಕಾಗಿ ಅವಶ್ಯವೆಂದು ಪ್ರಾಧಿಕಾರಕ್ಕೆ ಅಥವಾ ಆ ಅಧಿಕಾರಿಗೆ ಮನದಟ್ಟಾದ ಯಾವುದೇ ಸಂದರ್ಭದಲ್ಲಿ ಕಾಲಕಾಲಕ್ಕೆ ಆದೇಶದ ಮೂಲಕ ನಿರ್ದೇಶನಗಳನ್ನು ನೀಡಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ನಿರ್ದೇಶನವನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ನೀಡಲಾಗಿದೆಯೋ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಅದನ್ನು ಪಾಲಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸಲು ಯಾವನೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**34. ಯಾವುದೇ ಏರೋಡ್ರೊಮ್‌ನ ವ್ಯವಸ್ಥಾಪನೆಯನ್ನು ಪ್ರಾಧಿಕಾರದಿಂದ ತಾತ್ಕಾಲಿಕವಾಗಿ ತಪ್ಪಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಯಾವುದೇ ಸಮಯದಲ್ಲಿ ಸಾರ್ವಜನಿಕ ಹಿತಾಸಕ್ತಿಗಾಗಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮವುಳ್ಳಂತೆ ಮತ್ತು ಅಂಥ ವ್ಯಕ್ತಿಗಳಿಗೆ ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರಗಳ ವ್ಯವಸ್ಥಾಪನೆಯನ್ನು ವಹಿಸಿಕೊಡುವಂತೆ ಪ್ರಾಧಿಕಾರಕ್ಕೆ ನಿರ್ದೇಶಿಸುವುದು ಅವಶ್ಯವೆಂದು ಅಥವಾ ವಿಹಿತವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಹಾಗೆ ನಿರ್ದೇಶಿಸಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನವನ್ನು ಪಾಲಿಸುವುದಕ್ಕೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಮೊದಲು ಈ ವಿಷಯದಲ್ಲಿ ತನ್ನ ಅಹವಾಲು ಹೇಳಿಕೊಳ್ಳಲು ಪ್ರಾಧಿಕಾರಕ್ಕೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

(2) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ವ್ಯವಸ್ಥಾಪನೆಯನ್ನು (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಯಾವನೇ ವ್ಯಕ್ತಿಗೆ (ಇನ್ನು ಮುಂದೆ ಈ ಪ್ರಕರಣದಲ್ಲಿ ಅಧಿಕೃತ ವ್ಯಕ್ತಿ ಎಂದು ಉಲ್ಲೇಖಿಸಲಾಗಿದೆ) ವಹಿಸಿರುವಲ್ಲಿ, ಪ್ರಾಧಿಕಾರವು ಅಂಥ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರಕ್ಕೆ ಸಂಬಂಧಿಸಿದ ಈ ಅಧಿನಿಯಮದ ಮೇರೆಗಿನ ಅದರ ಎಲ್ಲಾ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುವುದು ಮತ್ತು ನಿರ್ವಹಿಸುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಧಿಕೃತ ವ್ಯಕ್ತಿಗೆ ನೀಡಬಹುದಾದಂಥ ಸೂಚನೆಗಳು ಯಾವುವಾದರೂ ಇದ್ದರೆ ಅವುಗಳಿಗೆ ಅನುಸಾರವಾಗಿ ಆ ಅಧಿಕೃತ ವ್ಯಕ್ತಿಯು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಅಧಿಕಾರ ಅಥವಾ ಪ್ರಕಾರ್ಯವನ್ನು ಕೇಂದ್ರ ಸರ್ಕಾರದ ಪೂರ್ವಮಂಜೂರಾತಿ ಇಲ್ಲದ ಹೊರತು ಅಧಿಕೃತ ವ್ಯಕ್ತಿಯು ಚಲಾಯಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ.

(3) 1ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶವನ್ನು ರದ್ದು ಮಾಡದ ಹೊರತು, ಅದು ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ವ್ಯವಸ್ಥಾಪನೆಯನ್ನು ಅಧಿಕೃತ ವ್ಯಕ್ತಿಗೆ ವಹಿಸಿಕೊಟ್ಟ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಅಂಥ ಅವಧಿಯನ್ನು ಹದಿನೆಂಟು ತಿಂಗಳಿಗೆ ಮೀರದ ಹೆಚ್ಚಿನ ಅವಧಿಯವರೆಗೆ ವಿಸ್ತರಿಸಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶವು ಜಾರಿಯಲ್ಲಿರುವಾಗ, ಯಾವ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ವ್ಯವಸ್ಥಾಪನೆಯನ್ನು ಅಧಿಕೃತ ವ್ಯಕ್ತಿಗೆ ವಹಿಸಿಕೊಡಲಾಗಿದೆಯೋ ಆ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಆ ಅಧಿಕೃತ ವ್ಯಕ್ತಿಗೆ ಅನುಕೂಲವಾಗಲು ಮತ್ತು ವಿಶೇಷವಾಗಿ, ಆ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ವ್ಯವಸ್ಥಾಪನೆಗಾಗಿ ಪ್ರಾಧಿಕಾರದ ನಿಧಿಯಿಂದ, ಆ ಅಧಿಕೃತ ವ್ಯಕ್ತಿಗೆ ಯಾವುದೇ ಹಣದ ಮೊತ್ತವನ್ನು ವರ್ಗಾಯಿಸಲು ಅವಶ್ಯವಾಗುವ ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಲು ಕೇಂದ್ರ ಸರ್ಕಾರವು ಸಕ್ಷಮವಾಗಿರತಕ್ಕದ್ದು ಮತ್ತು ಅಂಥ ಪ್ರತಿಯೊಂದು ನಿರ್ದೇಶನವನ್ನು ಪ್ರಾಧಿಕಾರವು ಪಾಲಿಸತಕ್ಕದ್ದು.

(5) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದ ಜಾರಿಯು ಸಮಾಪ್ತವಾದ ಮೇಲೆ ಅಧಿಕೃತ ವ್ಯಕ್ತಿಯು, ಅಂಥ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರದ ಅಧಿಕಾರಗಳ ಚಲಾವಣೆಯನ್ನು ಮತ್ತು ಪ್ರಕಾರ್ಯಗಳ ನಿರ್ವಹಣೆಯನ್ನು ನಿಲ್ಲಿಸತಕ್ಕದ್ದು ಮತ್ತು ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳನುಸಾರ ಅಂಥ ಅಧಿಕಾರಗಳ ಚಲಾವಣೆಯನ್ನು ಮತ್ತು ಪ್ರಕಾರ್ಯಗಳ ನಿರ್ವಹಣೆಯನ್ನು ಮುಂದುವರಿಸತಕ್ಕದ್ದು.

(6) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದ ಜಾರಿಯು ಸಮಾಪ್ತವಾದ ಮೇಲೆ, ಅಧಿಕೃತ ವ್ಯಕ್ತಿಯು, ಅಂಥ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರದ ವ್ಯವಸ್ಥಾಪನೆಯ ಸಂಬಂಧದಲ್ಲಿ, ಅವನಲ್ಲಿ ಉಳಿದಿರುವ ಯಾವುದೇ ಸ್ವತ್ತನ್ನು (ಯಾವುದೇ ಹಣದ ಮೊತ್ತ ಅಥವಾ ಇತರ ಆಸ್ತಿಗಳೂ ಸೇರಿ) ಪ್ರಾಧಿಕಾರದ ವಶಕ್ಕೆ ಒಪ್ಪಿಸತಕ್ಕದ್ದು.

(7) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಒಂದು ಆದೇಶದ ಜಾರಿಯ ಅವಧಿಯಲ್ಲಿ ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರದ ಸಂಬಂಧದಲ್ಲಿ ಅಧಿಕೃತ ವ್ಯಕ್ತಿಯು ಕಾನೂನು ಬದ್ಧವಾಗಿ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕಾರ್ಯಗಳನ್ನು

ಪ್ರಾಧಿಕಾರವು ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು ಮತ್ತು ಪ್ರಾಧಿಕಾರವು ಅದಕ್ಕೆ ಬದ್ಧವಾಗಿರತಕ್ಕದ್ದು.

**35. ಪ್ರಾಧಿಕಾರವನ್ನು ಅಧಿಕ್ರಮಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಯಾವುದೇ ಸಮಯದಲ್ಲಿ, ಕೇಂದ್ರ ಸರ್ಕಾರವು,–

(ಎ) ಗಂಭೀರ ತುರ್ತು ಪರಿಸ್ಥಿತಿಯ ಕಾರಣದಿಂದಾಗಿ, ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ತನಗೆ ವಹಿಸಲಾದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅಸಮರ್ಥವಾಗಿರುವುದಾಗಿ; ಅಥವಾ

(ಬಿ) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ತನಗೆ ವಿಧಿಸಲಾದ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನಿರಂತರವಾಗಿ ತಪ್ಪು ಮಾಡಿದ್ದು ಆ ತಪ್ಪಿನ ಪರಿಣಾಮವಾಗಿ, ಪ್ರಾಧಿಕಾರದ ಹಣಕಾಸಿನ ಸ್ಥಿತಿ ಅಥವಾ ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್ ಅಥವಾ ವೈಮಾನಿಕ ಸಂಪರ್ಕ ಕೇಂದ್ರದ ಆಡಳಿತವು ಇಳಿಗತಿ ಹೊಂದಿರುವುದಾಗಿ; ಅಥವಾ

(ಸಿ) ಸಾರ್ವಜನಿಕ ಹಿತಸಕ್ತಿಯನ್ನು ಪ್ರಾಧಿಕಾರವನ್ನು ಅಧಿಕ್ರಮಿಸುವಂಥ ಸನ್ನಿವೇಶಗಳು ಇರುವುದಾಗಿ –

– ಅಭಿಪ್ರಾಯಪಟ್ಟರೆ ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದ ಅವಧಿಗೆ ಪ್ರಾಧಿಕಾರವನ್ನು ಅಧಿಕ್ರಮಿಸಬಹುದು:

ಪರಂತು, (ಬಿ) ಖಂಡದಲ್ಲಿ ನಮೂದಿಸಿರುವ ಕಾರಣಗಳಿಗಾಗಿ ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವ ಮೊದಲು, ಕೇಂದ್ರ ಸರ್ಕಾರವು, ಪ್ರಾಧಿಕಾರಕ್ಕೆ ಅದನ್ನು ಏಕೆ ಅಧಿಕ್ರಮಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರದ ವಿವರಣೆಗಳು ಮತ್ತು ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) ಪ್ರಾಧಿಕಾರವನ್ನು ಅಧಿಕ್ರಮಿಸಿ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ,–

(ಎ) ಅಧಿಕ್ರಮಣದ ದಿನಾಂಕದಿಂದ ಎಲ್ಲಾ ಸದಸ್ಯರು ತಮ್ಮ ಪದವನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಪ್ರಾಧಿಕಾರವು ಅಥವಾ ಅದರ ಪರವಾಗಿ ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು ಅಥವಾ ನಿರ್ವಹಿಸಬಹುದಾದಂಥ ಎಲ್ಲಾ ಪ್ರಕಾರ್ಯಗಳು ಮತ್ತು ಕತ್ಯರ್ವಗಳನ್ನು (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್‌ರಚಿಸುವವರೆಗೆ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಸಿ) ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತುಗಳು, (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್‌ರಚಿಸುವವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ನೀಡಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಅಧಿಕ್ರಮಣದ ಅವಧಿಯು ಮುಗಿದ ತರುವಾಯ, ಕೇಂದ್ರ ಸರ್ಕಾರವು,–

(ಎ) ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತೆ ಆರು ತಿಂಗಳಿಗೆ ಮೀರದ ಹೆಚ್ಚಿನ ಅವಧಿಗೆ ಅಧಿಕ್ರಮಣದ ಅವಧಿಯನ್ನು ವಿಸ್ತರಿಸಬಹುದು; ಅಥವಾ

(ಬಿ) ಹೊಸ ನೇಮಕಾತಿಗಳ ಮೂಲಕ ಪ್ರಾಧಿಕಾರವನ್ನು ಪುನರ್‌ರಚಿಸಬಹುದು ಮತ್ತು ಅಂಥ ಪ್ರಸಂಗದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತಮ್ಮ ಪದವನ್ನು ತೆರವು ಮಾಡಿದ ಯಾರೇ ವ್ಯಕ್ತಿಗಳನ್ನು ನೇಮಕಾತಿಗೆ ಅನರ್ಹರು ಎಂಬುದಾಗಿ ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಮೂಲತಃ ನಿರ್ದಿಷ್ಟಪಡಿಸಿದ ಅಥವಾ ಈ ಉಪ ಪ್ರಕರಣದ ಮೇರೆಗೆ ವಿಸ್ತರಿಸಲಾದ ಅಧಿಕ್ರಮಣದ ಅವಧಿ ಮುಗಿಯುವ ಮೊದಲು ಯಾವುದೇ ಸಮಯದಲ್ಲಿ, ಈ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕ್ರಮ ಕೈಗೊಳ್ಳಬಹುದು.

(4) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ಮತ್ತು ಈ ಪ್ರಕರಣದ ಮೇರೆಗೆ ಕೈಗೊಳ್ಳಲಾದ ಯಾವುದೇ ಕ್ರಮ ಮತ್ತು ಅಂಥ ಕ್ರಮ ಕೈಗೊಂಡಿರುವ ಸಂದರ್ಭಗಳ ಬಗ್ಗೆ ಪೂರ್ಣ ವರದಿಯನ್ನು ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**36. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳು ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ಕಾರ್ಯನೀತಿಯ ಪ್ರಶ್ನೆಗಳ ಬಗ್ಗೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ತನಗೆ ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವ ಮೊದಲು ಪ್ರಾಧಿಕಾರವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಅದಕ್ಕೆ ಅವಕಾಶವನ್ನು ಕೊಡತಕ್ಕದ್ದು.

(2) ಯಾವುದೇ ಪ್ರಶ್ನೆಯು ಕಾರ್ಯನೀತಿಯದ್ದಾಗಿರಲಿ ಅಥವಾ ಇಲ್ಲದಿರಲಿ, ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಕೇಂದ್ರ ಸರ್ಕಾರವು, 12ನೇ ಪ್ರಕರಣದ (3)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಅದರ ಯಾವುದೇ ಪ್ರಕಾರ್ಯಗಳ ನಿರ್ವಹಣೆಯ ಕುರಿತು ಪ್ರಾಧಿಕಾರಕ್ಕೆ ಕಾಲಕಾಲಕ್ಕೆ ನಿರ್ದೇಶನಗಳನ್ನು ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**37. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ಪೂರ್ಣಕಾಲಿಕ ಸೇವೆ ಮಾಡಬೇಕಾಗಿರುವಂಥ ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಅಂಶಕಾಲಿಕ ಸೇವೆ ಮಾಡಬೇಕಾಗಿರುವಂಥ ಸದಸ್ಯರಿಗೆ ಸಂದಾಯ ಮಾಡಬಹುದಾದ ಫೀಜು ಮತ್ತು ಭತ್ಯೆಗಳು ಸೇರಿ 5ನೇ ಪ್ರಕರಣದ ಮೇರೆಗೆ ಅಧ್ಯಕ್ಷ ಮತ್ತು ಸದಸ್ಯರ ಸೇವಾ ಷರತ್ತುಗಳಿಗೆ;

(ಬಿ) 5ನೇ ಪ್ರಕರಣದ ಮೇರೆಗೆ ಸರ್ಕಾರಿ ನೌಕರನಲ್ಲದ ಒಬ್ಬ ಅಂಶಕಾಲಿಕ ಸೇವೆ ಮಾಡಬೇಕಾದ ಯಾವನೇ ಸದಸ್ಯನ ನೇಮಕವನ್ನು ಕೊನೆಗೊಳಿಸುವ ಸಂಬಂಧದ ನೋಟೀಸಿನ ಅವಧಿ ಮತ್ತು ಆ ಪ್ರಕರಣದ ಮೇರೆಗೆ ತನ್ನ ಪದಕ್ಕೆ ರಾಜೀನಾಮೆ ನೀಡುವ ಮೊದಲು ಸದಸ್ಯನು ಕೇಂದ್ರ ಸರ್ಕಾರಕ್ಕೆ ಕೊಡಬಹುದಾದ ನೋಟೀಸಿನ ಅವಧಿ;

(ಸಿ) ಪ್ರಾಧಿಕಾರವು 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಗಳನ್ನು ಮತ್ತು ಇತರ ನಿಯೋಜಿತರನ್ನು ಯಾವ ಷರತ್ತುಗಳು ಮತ್ತು ಪರಮಿತಿಗೊಳಪಟ್ಟು ನೇಮಕ ಮಾಡಬಹುದೋ ಆ ಷರತ್ತುಗಳು ಮತ್ತು ಪರಿಮಿತಿಗಳು;

(ಡಿ) ಯಾವುದೇ ಏರೋಡ್ರೊಮ್, ಸಿವಿಲ್ ಎನ್‌ಕ್ಲೇವ್, ವೈಮಾನಿಕ ಸಂಪರ್ಕ ಕೇಂದ್ರ, ಸಿವಿಲ್ ವಿಮಾನಯಾನ ತರಬೇತಿ ಕೇಂದ್ರ ಮತ್ತು ಅಗ್ನಿಶಾಮಕ ಸೇವಾ ತರಬೇತಿ ಶಾಲೆ – ಇವುಗಳ ಉದ್ದೇಶಗಳಿಗಾಗಿ ಅಥವಾ ಆ ಉದ್ದೇಶಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ವಹಿಸಲಾದ ಅನಾವರ್ತ ವೆಚ್ಚಗಳನ್ನು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು 13ನೇ ಪ್ರಕರಣದ (1)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಪ್ರಾಧಿಕಾರಕ್ಕೆ ಕೇಂದ್ರ ಸರ್ಕಾರವು ಒದಗಿಸಿರುವ ಬಂಡವಾಳವೆಂದು ಪರಿಗಣಿಸತಕ್ಕದೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಇ) 22ನೇ ಪ್ರಕರಣದ ಮೇರೆಗೆ ಪ್ರಾಧಿಕಾರವು ಅದರ ನಿಧಿಗಳನ್ನು ಹೂಡಬಹುದಾದ ರೀತಿ;

(ಎಫ್) 24ನೇ ಪ್ರಕರಣದ ಮೇರೆಗೆ ಲಾಭ ಮತ್ತು ನಷ್ಟಗಳ ಲೆಕ್ಕ ಮತ್ತು ಆಯವ್ಯಯ ಪಟ್ಟಿಯೂ ಸೇರಿ ವಾರ್ಷಿಕ ಲೆಕ್ಕಪತ್ರಗಳ ವಿವರ ಪಟ್ಟಿಯನ್ನು ಪ್ರಾಧಿಕಾರವು ಸಿದ್ಧಪಡಿಸತಕ್ಕ ನಮೂನೆ; ಮತ್ತು

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ

– ಇವುಗಳ ಬಗ್ಗೆ ಉಪಬಂಧಿಸಬಹುದು.

**38. ವಿನಿಯಮ ರಚನಾಧಿಕಾರ.–** (1) ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಯಾವ ವಿಷಯಗಳ ಬಗ್ಗೆ ಉಪಬಂಧಿಸುವುದು ಅವಶ್ಯ ಅಥವಾ ವಿಹಿತವಿರುವುದೋ ಆ ಎಲ್ಲಾ ವಿಷಯಗಳ ಬಗ್ಗೆ ಉಪಬಂಧಿಸಲು ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಲ್ಲದ ವಿನಿಯಮಗಳನ್ನು ರಚಿಸಬಹುದು.

(2) ಈ ಹಿಂದೆ ಹೇಳಿರುವ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು,–

(ಎ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಸಭೆ ಸೇರಬೇಕಾದ ಸ್ಥಳಗಳು ಮತ್ತು ವೇಳೆ ಮತ್ತು ಅಂಥ ಸಭೆಗಳಲ್ಲಿ ಕಾರ್ಯಕಲಾಪ ನಡೆಸಲು ಅನುಸರಿಸಬೇಕಾದ ಪ್ರಕ್ರಿಯೆ;

(ಬಿ) ಪ್ರಾಧಿಕಾರವು ನೇಮಕ ಮಾಡಿದ ಅಧಿಕಾರಿಗಳ ಮತ್ತು ಇತರೆ ನೌಕರರ ಸೇವಾ ಷರತ್ತುಗಳು ಮತ್ತು ಪರಿಶ್ರಮ ಧನ;

(ಸಿ) ಪ್ರಾಧಿಕಾರವು ನೇಮಕ ಮಾಡಿದ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ವಸತಿಗಳ ಹಂಚಿಕೆ;

(ಡಿ) ಪ್ರಾಧಿಕಾರದ ಸಾಮಾನ್ಯ ಮೊಹರು ಹಾಕಬೇಕಾದಂಥ ಕರಾರುಗಳು ಅಥವಾ ಕರಾರುಗಳ ವರ್ಗ ಮತ್ತು ಪ್ರಾಧಿಕಾರವು ಮಾಡಬಹುದಾದ ಕರಾರಿನ ನಮೂನೆ ಮತ್ತು ರೀತಿ;

(ಇ) 12ನೇ ಪ್ರಕರಣದ (3)ನೇ ಉಪಪ್ರಕರಣದ (ಜಿ) ಖಂಡದ ಮೇರೆಗೆ ಪ್ರಾಧಿಕಾರವು ಸ್ಥಾಪಿಸಿದ ಯಾವುದೇ ಉಗ್ರಾಣದಲ್ಲಿ ಸರಕುಗಳ ಸಂಗ್ರಹಣೆ ಅಥವಾ ಸಂಸ್ಕರಣೆ ಮತ್ತು ಅಂಥ ಸಂಗ್ರಹಣೆ ಮತ್ತು ಸಂಸ್ಕರಣದ ಬಗ್ಗೆ ಫೀಜುಗಳನ್ನು ವಿಧಿಸುವುದು;

(ಎಫ್) ಕಳೆದುಹೋದ ಸ್ವತ್ತಿನ ಅಭಿರಕ್ಷೆ ಮತ್ತು ವಾಪಸಾತಿ ಮತ್ತು ಕಳೆದುಹೋದ ಸ್ವತ್ತನ್ನು ಅದರ ಮೇಲೆ ಹಕ್ಕುಳ್ಳ ವ್ಯಕ್ತಿಗಳಿಗೆ ಯಾವ ನಿಬಂಧನೆ ಮತ್ತು ಷರತ್ತುಗಳ ಮೇಲೆ ವಾಪಸ್ಸು ಕೊಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಜಿ) ಕಳೆದುಹೋದ ಯಾವುದೇ ಸ್ವತ್ತನ್ನು ವಾಪಸು ಮಾಡದಿರುವ ಸಂದರ್ಭಗಳಲ್ಲಿ ಅದರ ವಿಲೆ;

(ಹೆಚ್) ವಿಮಾನ, ವಾಹನಗಳು ಮತ್ತು ಏರೋಡ್ರೊಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನ್ನು ಉಪಯೋಗಿಸುವ ವ್ಯಕ್ತಿಗಳ ಸುರಕ್ಷತೆಯನ್ನು ಖಚಿತಪಡಿಸುವುದು ಮತ್ತು ಏರೋಡ್ರೊಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನಲ್ಲಿನ ವಿಮಾನದ ಬಳಕೆ ಮತ್ತು ಕಾರ್ಯಚರಣೆಯಿಂದ ಸಾರ್ವಜನಿಕರಿಗೆ ಉಂಟಾಗುವ ಅಪಾಯವನ್ನು ತಡೆಗಟ್ಟುವುದು;

(ಐ) ಏರೋಡ್ರೊಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನ ಸಾಮಾನ್ಯ ಕಾರ್ಯನಿರ್ವಹಣೆಗಾಗಿ ಆ ಏರೋಡ್ರೊಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನಲ್ಲಿನ ಅಡ್ಡಿ ಆತಂಕಗಳನ್ನು ತಡೆಗಟ್ಟುವುದು;

(ಜೆ) ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನೊಳಗೆ ಪ್ರಾಧಿಕಾರವು ನಿರ್ದಿಷ್ಟಪಡಿಸಿದ ಸ್ಥಳಗಳ ಹೊರತು ಅಲ್ಲಿ ಯಾವುದೇ ವಾಹನಗಳನ್ನು ನಿಲ್ಲಿಸುವುದನ್ನು ಅಥವಾ ಕಾಯುವುದನ್ನು ನಿಷೇಧಿಸಿವುದು;

(ಕೆ) ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನ ಯಾವುದೇ ಭಾಗಕ್ಕೆ ಪ್ರವೇಶದ ನಿಷೇಧ ಅಥವಾ ನಿರ್ಬಂಧ;

(ಎಲ್) ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನ ಒಳಗೆ ವ್ಯವಸ್ಥೆಯನ್ನು ಪಾಲಿಸುವುದು ಮತ್ತು ಅಲ್ಲಿನ ಸ್ವತ್ತಿಗೆ ಹಾನಿಯಾಗದ ಹಾಗೆ ತಡೆಗಟ್ಟುವುದು;

(ಎಂ) ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವ್ ಒಳಗೆ ಜಾಹೀರಾತಿನ ವಿನಿಯಮನ ಅಥವಾ ನಿರ್ಬಂಧ;

(ಎನ್) ಪ್ರಾಧಿಕಾರವು ನೇಮಕ ಮಾಡಿದ ಅಧಿಕಾರಿಯು ನಿರ್ದೇಶಿಸಿದರೆ ಯಾವನೇ ವ್ಯಕ್ತಿಯು ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವನ್ನು ಅಥವಾ ಏರೋಡ್ರೋಮ್‌ನ ಸಿವಿಲ್ ಎನ್‌ಕ್ಲೇವಿನ ಯಾವುದೇ ನಿರ್ದಿಷ್ಟ ಭಾಗವನ್ನು ಬಿಡುವಂತೆ ಅಗತ್ಯಪಡಿಸುವುದು;

(ಒ) ಸಾಮಾನ್ಯವಾಗಿ ಏರೋಡ್ರೋಮ್ ಅಥವಾ ಸಿವಿಲ್ ಎನ್‌ಕ್ಲೇವ್‌ನ ದಕ್ಷ ಮತ್ತು ಯುಕ್ತ ಕಾರ್ಯನಿರ್ವಹಣೆ

– ಇವುಗಳ ಬಗ್ಗೆ ಉಪಬಂಧಿಸಬಹುದು.

(3) (2)ನೇ ಉಪಪ್ರಕರಣದ (ಹೆಚ್) ದಿಂದ (ಒ) ಖಂಡಗಳವರೆಗಿನ (ಎರಡು ಸೇರಿ) ಖಂಡಗಳ ಪೈಕಿ ಯಾವುದೇ ಖಂಡದ ಮೇರೆಗೆ ರಚಿಸಲಾದ ಯಾವುದೇ ವಿನಿಯಮವು ಅದರ ಉಲ್ಲಂಘನೆಯು ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಂಥ ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಗಾಗಿ ಅಪರಾಧಿ ಎಂದು ನಿರ್ಣೀತವಾದ ತರುವಾಯ ಮುಂದುವರಿಯುತ್ತಿರುವ ಉಲ್ಲಂಘನೆ ಅವಧಿಯಲ್ಲಿ ಪ್ರತಿ ದಿವಸಕ್ಕೆ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು ಎಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೇರೆಗೆ ಪ್ರಾಧಿಕಾರವು ರಚಿಸಿದ ಯಾವುದೇ ವಿನಿಯಮವು ಕೇಂದ್ರ ಸರ್ಕಾರವು ಅನುಮೋದಿಸುವವರೆಗೆ ಮತ್ತು ರಾಜಪತ್ರದಲ್ಲಿ ಪ್ರಕಟವಾಗುವವರೆಗೆ ಅದು ಪರಿಣಾಮಕಾರಿಯಾಗತಕ್ಕದ್ದಲ್ಲ.

**39. ವಿನಿಯಮಗಳಿಗೆ ಸಂಬಂಧಪಟ್ಟ ಪೂರಕ ಉಪಬಂಧಗಳು.–** ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಬಹುದಾದಂಥ ಯಾವುದೇ ವಿನಿಯಮವನ್ನು, ಪ್ರಾಧಿಕಾರವು ರಚನೆಯಾದ ಒಂದು ವರ್ಷದೊಳಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ರಚಿಸಬಹುದು ಮತ್ತು ಆ ರೀತಿ ರಚಿಸಿದ ಯಾವುದೇ ವಿನಿಯಮವನ್ನು ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತಾನು ರಚಿಸಿದ ವಿನಿಯಮದ ಮೂಲಕ ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

**40. ಸಂಸತ್ತಿನ ಮುಂದೆ ನಿಯಮಗಳು ಮತ್ತು ವಿನಿಯಮಗಳನ್ನು ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮ ಅಥವಾ ವಿನಿಯಮವನ್ನು, ಅವನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ, ಅಥವಾ ಸಂದರ್ಭಾನುಸಾರ ಆ ನಿಯಮ ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳೂ ಒಪ್ಪಿದರೆ, ಆ ನಿಯಮ ಅಥವಾ ವಿನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**41. ತೊಂದರೆಗಳ ನಿವಾರಣೆಗೆ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯುಂಟಾದಲ್ಲಿ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಲಾದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ತೊಂದರೆ ನಿವಾರಿಸಲು ಅವಶ್ಯ ಅಥವಾ ವಿಹಿತವೆಂದು ಅದಕ್ಕೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಒಂದು ವರ್ಷದ ಅವಧಿಯು ಮುಗಿದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ಆದೇಶವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು

ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**42. 1934ರ 22ನೇ ಅಧಿನಿಯಮದ ತಿದ್ದುಪಡಿ.–** ವಿಮಾನ ಅಧಿನಿಯಮ, 1934ರ 5ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1971" (1971ರ 43) ಎಂಬ ಪದಗಳು ಮತ್ತು ಅಂಕಿಗಳ ತರುವಾಯ "ಅಥವಾ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಅಧಿನಿಯಮ, 1985" ಎಂಬ ಪದಗಳು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

* * *